# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ

# ನಡಾವಳಿಗಳು

## ಸಭಾ ದಿನಾಂಕ : 08-03-2022

(ದಿನಾಂಕ:28-02-2022ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದುವರೆದ ಭಾಗ)


ಪ್ರಾಧಿಕಾರಗಳ ವಿಭಾಗ

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451
ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
☎ 08282-256148 (ಪ್ರಾಧಿಕಾರಗಳ ವಿಭಾಗ)
ಇ-ಮೇಲ್ :drsyndicateku@gmail.com
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-I:ಸಿ-1(ಮು)-22: 05 :2020-21 ದಿನಾಂಕ:04-04-2022

ಮಾನ್ಯರೆ,

ವಿಷಯ: ದಿನಾಂಕ:08-03-2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ- III ರ ಪ್ರಕರಣ- 16 ರನ್ವಯ ದಿನಾಂಕ:08-03-2022 ರಂದು (ದಿನಾಂಕ:28-02-2022ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದುವರೆದ ಭಾಗ) ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಭವನದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-IIIರ ಪ್ರಕರಣ - 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

**ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.**

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ./ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
10) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಅಧೀಕ್ಷಕರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
11) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
12) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
13) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
14) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
15) ಕಾರ್ಯಪಾಲಕ ಅಭಿಯಂತರರು, ಇಂಜನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:08-03-2022 ರಂದು ಮಂಗಳವಾರ ಪೂರ್ವಾಹ್ನ : 11.00 ಗಂಟೆಗೆ "ಶತಮಾನೋತ್ಸ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ (ದಿನಾಂಕ:28-02-2022ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದುವರೆದ ಭಾಗ) "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.**

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಆಯ್ಕೆ ಶ್ರೇಣಿ) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಎಸ್.ಕೆ. ನವೀನ್ ಕುಮಾರ್, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಅಶೋಕ್ ಡಿ.ರೇವಣ್‌ಕರ್, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. | ಶ್ರೀ ಎಸ್. ಆರ್. ಮಂಜುನಾಥ | ಸದಸ್ಯರು |
| 7. | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 8. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 9. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 10. | ಶ್ರೀ ಧರ್ಮ ಪ್ರಸಾದ್ ಜಿ. | ಸದಸ್ಯರು |
| 11. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 12. | ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 13. | ಪ್ರೊ. ರಿಯಾಜ್ ಮಹಮೂದ್ | ಸದಸ್ಯರು |
| 14. | ಶ್ರೀ ರಾಜಶೇಖರ ಪಿ. ಬಿ. ಪ್ರಾಂಶುಪಾಲರು | ಸದಸ್ಯರು |
| 15. | ಶ್ರೀಮತಿ ಭಾರತಿ, ಪ್ರಾಂಶುಪಾಲರು | ಸದಸ್ಯರು |
| 16. | ಶ್ರೀ ನಟೇಶ ಎಸ್. ಎಂ., ಪ್ರಾಂಶುಪಾಲರು | ಸದಸ್ಯರು |
| 17. | ಡಾ. ಧನಂಜಯ ಬಿ.ಜಿ., ಪ್ರಾಂಶುಪಾಲರು | ಸದಸ್ಯರು |

ಗೈರುಹಾಜರಾದ ಸದಸ್ಯರು:

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:

ಯಾರು ಇರುವುದಿಲ್ಲ.

ಪ್ರಸ್ತಾವನೆ: ಪ್ರಾರಂಭದಲ್ಲಿ ಸಭೆಯಲ್ಲಿ ಭಾಗವಹಿಸಿದ ಎಲ್ಲ ಸದಸ್ಯರನ್ನು ಕುಲಸಚಿವರು ಆತ್ಮೀಯವಾಗಿ ಸ್ವಾಗತಿಸಿದರು. ಕುವೆಂಪು ವಿಶ್ವವಿದ್ಯಾಲಯದ ನೂತನ ಕುಲಸಚಿವ(ಪರೀಕ್ಷಾಂಗ)ರಾಗಿ ಸರ್ಕಾರದಿಂದ ನೇಮಕವಾದ ಪ್ರೊ. ನವೀನ್‌ಕುಮಾರ್ ಎಸ್.ಕೆ. ಇವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು. ಹಾಗೂ ಡೀನರ ಜೇಷ್ಠತೆ ಆಧಾರದ ಮೇರೆಗೆ ನೂತನವಾಗಿ ಸಿಂಡಿಕೇಟ್ ಸಭೆಗೆ ಆಯ್ಕೆಯಾಗಿರುವ ಪ್ರೊ. ರಿಯಾಜ್ ಮಹಮೂದ್ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ ಇವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಲಾಯಿತು.

ಸಿಂಡಿಕೇಟ್ ಸದಸ್ಯತ್ವ ಅವಧಿ ಪೂರ್ಣಗೊಂಡ ನಿರ್ಗಮಿತ ಸದಸ್ಯರಾದ ಪ್ರೊ. ಹೆಚ್.ಎನ್ ರಮೇಶ್, ಪ್ರೊ. ವಿ. ಕೃಷ್ಣ ಇವರ ಸಹಕಾರವನ್ನು ಸ್ಮರಿಸಿ ಅಭಿನಂದಿಸಿದರು. ನಂತರ ಮಾನ್ಯ ಕುಲಪತಿಗಳು ಸಭೆಯನ್ನು ಮುಂದುವರೆಸಲು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾಲಯವು ಅಥೇನ್ಸ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದು ಹಾಗೂ ವಿಶ್ವವಿದ್ಯಾಲಯದ ಜಾಗದ ಸಮಸ್ಯೆ ಬಗೆಹರಿಯವ ಹಂತದಲ್ಲಿರುವುದು ಇವರೆಡು ವಿಷಯಗಳೂ ಬಹಳ ಸಂತೋಷದ ಸಂಗತಿಗಳು ಇದಕ್ಕಾಗಿ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದು ಹೇಳಿದರು. ನನಗಿಂತ ಹಿಂದೆ ಇದ್ದ ಕುಲಪತಿಗಳು ಈ ಬಗ್ಗೆ ಬಹಳ ಪ್ರಯತ್ನ ಮಾಡಿದ್ದರು ಆದರೆ ಆಗಿರಲಿಲ್ಲ. ವಿಜ್ಞಾನ ಕೇಂದ್ರ ಕೂಡ ಆಗುತ್ತಿದೆ. ನಾವು ವಿಶ್ವವಿದ್ಯಾಲಯದಲ್ಲಿ ಒಂದು ಇಂಟರ್ ನ್ಯಾಷನಲ್ ರೀಸರ್ಚ ಸೆಂಟರ್ ಮಾಡಬೇಕು ಎಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೆವು. ನಾನು ಕುಲಪತಿಯಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ಸರ್ಕಾರಕ್ಕೆ ರೂ.500 ಕೋಟಿಯ ಪ್ರಸ್ತಾವನೆ ಸಲ್ಲಿಸಲಾಗಿತ್ತು. ನಂತರ ಅದನ್ನು ಪರಿಷ್ಕರಿಸಿ ರೂ. 200 ಕೋಟಿಯ ಪ್ರಸ್ತಾವನೆ ಸಲ್ಲಿಸಲಾಗಿದೆ. ನಾವೂ ಸರ್ಕಾರದಿಂದ ಅನುದಾನ ತರಲು ಪ್ರಯತ್ನಿಸಿದ್ದೇವೆ ಎಂದು ಹೇಳಿದರು.

ನಂತರ ಕುಲಸಚಿವರಿಗೆ ದಿ:28-02-2022ರಂದು ಮುಂದೂಡಿದ ವಿಷಯಗಳನ್ನು ಕೈಗೆತ್ತಿಕೊಳ್ಳಲು ಸೂಚಿಸಿದರು.

## ದಿನಾಂಕ:01-02-2022 ರ ವಿಶೇಷ ಸಿಂಡಿಕೇಟ್ ಸಭೆಯ ವಿಷಯಗಳು :

## ಪ್ರಾಧಿಕಾರಗಳ ವಿಭಾಗ

**2022-ಸಿಂ-1.02(ಪ್ರ):** ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಮತ್ತು ಸಂಭಾವನೆ ಪರಿಷ್ಕರಣೆ ಕುರಿತಂತೆ ರಚಿಸಲಾದ ಸಮಿತಿಯ ಸಭೆಯ ನಡಾವಳಿ ಕುರಿತು.

**ಚರ್ಚೆ :** ದಿ:28-02-2022ರ ಸಭೆಯಲ್ಲಿ ವಿವರಗಳೊಂದಿಗೆ ಮಂಡಿಸಲು ತಿಳಿಸಲಾದ ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಮತ್ತು ಸಂಭಾವನೆ ಪರಿಷ್ಕರಣೆ ವಿಷಯವನ್ನು ಮುಂದುವರೆದ ಭಾಗವಾಗಿ ಚರ್ಚೆಗೆ ತೆಗೆದುಕೊಳ್ಳಲಾಯಿತು. ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಅತಿಥಿ ಉಪನ್ಯಾಸಕರ ಸೇವಾ ಅವಧಿಯನ್ನು ಗಣನೆಗೆ ತೆಗೆದುಕೊಳ್ಳುವಾಗ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವೆ ಮತ್ತು ಕಾಲೇಜುಗಳಲ್ಲಿ ಸಲ್ಲಿಸಿದ ಸೇವೆ ಎರಡನ್ನೂ ಪರಿಗಣಿಸಿ ಸೇವಾ ಪ್ರಮಾಣಪತ್ರ ನೀಡಬೇಕು ಎಂದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ನೇಮಕಗೊಳ್ಳುವ ಪೋಸ್ಟ್ ಡಾಕ್ಟರಲ್ ಫೆಲೋ(ಪಿ.ಡಿ.ಎಫ್) ಗಳನ್ನೂ ಬೋಧನೆಗೆ ಬಳಸಿಕೊಂಡು ಸದರಿ ಅವಧಿಯನ್ನೂ ಬೋಧನಾ ಅವಧಿ ಎಂದು ಪರಿಗಣಿಸಬಹುದು. ಅವರು ಪಿಹೆಚ್.ಡಿ ಆದ ನಂತರ ಅವರಿಗೆ ಫೆಲೋಶಿಪ್ ಮೇಲೆ ಹೆಚ್ಚಿನ ಸಂಶೋಧನೆಗಾಗಿ ಬಂದಿರುತ್ತಾರೆ ಅವರಿಗೆ ಫೆಲೋಶಿಪ್ ಸಿಗುತ್ತದೆ. ಆದ್ದರಿಂದ ಅವರನ್ನು ಬೋಧನೆಗೆ ಬಳಸಿಕೊಂಡು ಅದನ್ನು ಬೋಧನಾ ಅವಧಿ ಎಂದು ಪರಿಗಣಿಸಬೇಕು ಎಂದರು. ಇದರಿಂದ ಹೆಚ್ಚುವರಿ ಅತಿಥಿ ಉಪನ್ಯಾಸಕರನ್ನು ತೆಗೆದುಕೊಳ್ಳುವುದು ತಪ್ಪುತ್ತದೆ ಎಂದರು.

ಮುಂದುವರೆದು ಮಾತನಾಡಿ ಬೇರೆಬೇರೆ ವಿಶ್ವವಿದ್ಯಾಲಯಗಳಲ್ಲಿ ದೂರ ಶಿಕ್ಷಣ ಪ್ರಾರಂಭ ಮಾಡಿದಾಗ ಬೋಧಕರನ್ನು ನೇಮಕ ಮಾಡಿಕೊಳ್ಳುತ್ತಾರೆ. ಆದರೆ ನಮ್ಮ ವಿಶ್ವವಿದ್ಯಾಲಯದಲ್ಲಿ ಆರ್.ಟಿ.ಎ. ಗಳನ್ನು ನೇಮಕ ಮಾಡಿಕೊಂಡಿದ್ದೇವೆ. ಅತಿಥಿ ಉಪನ್ಯಾಸಕರು ಮತ್ತು ಆರ್.ಟಿ.ಎ. ಗಳನ್ನು ಒಂದೇ ಎಂದು ಪರಿಗಣಿಸಲು ಆಗುವುದಿಲ್ಲ ಅವರನ್ನು ಅರ್ಹತೆ ಆಧಾರದ ಮೇಲೆ ಪರಿಗಣಿಸಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಆರ್.ಟಿ.ಎ (ರೀಸರ್ಚ್ ಕಮ್ ಟೀಚಿಂಗ್ ಅಸಿಸ್ಟೆಂಟ್) ಎಂಬ ಪದನಾಮವಿರುವುದರಿಂದ ಇವರು ಅಧ್ಯಾಪಕರ ಹುದ್ದೆಗೆ ಅವಕಾಶವನ್ನು ಕಳೆದು ಕೊಳ್ಳುತಿದ್ದಾರೆ ಆದ್ದರಿಂದ ಅವರನ್ನೂ ಸಹ ಅತಿಥಿ ಉಪನ್ಯಾಸಕರಂತೆಯೇ ಪರಿಗಣಿಸಬೇಕು ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ 16 ವರ್ಷ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿದವರೊಬ್ಬರಿಗೆ ಕೆ.ಎಸ್.ಓ.ಯು ನಲ್ಲಿ ಐದು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಉಪನ್ಯಾಸಕರಾಗಿ ನೇಮಕ ಮಾಡಿಕೊಂಡಿದ್ದು ರೂ.50000-00 ವೇತನ ನೀಡುತ್ತಿದ್ದಾರೆ. ಇದನ್ನು ನೋಡಿದರೆ ನಮ್ಮ ವಿಶ್ವವಿದ್ಯಾಲಯದಲ್ಲಿ ಬಹಳ ವರ್ಷಗಳಿಂದ ಕೆಲಸ ಮಾಡುತ್ತಿರುವ ಆರ್.ಟಿ.ಎ. ಗಳಿಗೆ ಅನ್ಯಾಯವಾಗಿದೆ ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಮತ್ತು ಸಂಭಾವನೆ ಪರಿಷ್ಕರಣೆ ಕುರಿತಂತೆ ರಚಿಸಲಾದ ಸಮಿತಿಯು ವೇತನ ಪರಿಷ್ಕರಣೆಯ ಪಟ್ಟಿ ಮಾಡಿ ಕೊಟ್ಟಿದೆ. ಸಭೆ ಏನು ನಿರ್ಣಯ ತೆಗೆದುಕೊಳ್ಳುವುದು ಎಂಬುದರ ಮೇಲೆ ನಿಂತಿದೆ ಎಂದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥರವರು ಮಾತನಾಡಿ ಅತಿಥಿ ಉಪನ್ಯಾಸಕರ ಸೇವೆ ಅತ್ಯಗತ್ಯ ಸೇವೆ ಆಗಿರುವುದರಿಂದ ಇದಕ್ಕೆ ಹಣ ಇಲ್ಲ ಎಂದು ಹೇಳಲು ಬರುವುದಿಲ್ಲ ಎಂದರು. ಇದಕ್ಕೆ ಶ್ರೀ ರಾಮಲಿಂಗಪ್ಪರವರು ಧ್ವನಿಗೂಡಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಬಜೆಟ್‌ನಲ್ಲಿ ಈಗ ಅನುದಾನ ಹಂಚಿಕೆ ಮಾಡಬೇಕು ಎಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ವಿಶ್ವವಿದ್ಯಾಲಯ ಎಂದರೆ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಅಧ್ಯಾಪಕೇತರ ನೌಕರರು ಅವರಿಗೇ ಮೂಲಭೂತ ಸೌಕರ್ಯಗಳಿಲ್ಲ ಎಂದರೆ ಹೇಗೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ವಿವಿಧ ಸಾಫ್ಟ್ ವೇರ್ ಅಳವಡಿಕೆಯ ಸಂಬಂಧ ಬಂದ ಪ್ರಸ್ತಾವನೆಗಳನ್ನು ತಿರಸ್ಕರಿಸಿ, ಸೆಲ್ಫ್ ಫೈನಾನ್ಸ್ ಕೋರ್ಸುಗಳನ್ನು ಪ್ರಾರಂಭಿಸಿದರೆ ಹಾಗೂ ದೂರ ಶಿಕ್ಷಣದ ಆನ್ ಲೈನ್ ಕೋರ್ಸ್ ಮಾಡಿದರೆ ಸುಮಾರು ರೂ. 40-00 ಕೋಟಿ ಆದಾಯ ಕ್ರೋಢಿಕರಣ ಆಗಬಹುದು ಎಂದು ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಮತ್ತು ಸಂಭಾವನೆ ಪರಿಷ್ಕರಣೆ ಕುರಿತಂತೆ ರಚಿಸಲಾದ ಸಮಿತಿಯು ಸಲ್ಲಿಸಿರುವ ವೇತನ ಪರಿಷ್ಕರಣೆಯ ಪಟ್ಟಿಯನ್ನು ಯಥಾವತ್ತಾಗಿ ಜಾರಿಗೆ ತರಬಹುದು ಎಂದು ಹೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ದಿನಾಂಕ:22-03-2022ರಂದು ಹಣಕಾಸು ಸಮಿತಿ ಸಭೆ ನಡೆಯಲಿದೆ ಆ ಸಮಿತಿ ಸಭೆಯಲ್ಲಿಟ್ಟು ಅನುಮೋದನೆ ಆದ ನಂತರ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಸಿಂಡಿಕೇಟ್ ಸಭೆ ನಿರ್ಣಯ ತೆಗೆದುಕೊಂಡಿದೆ ಅದನ್ನು ಜಾರಿಗೆ ತರಬೇಕು ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಆದಾಯ ಇಲ್ಲದಿರುವುದರಿಂದ ಜಾರಿಗೆ ತರಲು ಕಷ್ಟ ಆಗುತ್ತದೆ ಎಂದರು

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ದೂರಶಿಕ್ಷಣದ ಅಧ್ಯಯನ ಕೇಂದ್ರಗಳು ಬಾಕಿ ಉಳಿಸಿಕೊಂಡಿರುವ ಶುಲ್ಕವನ್ನು ವಸೂಲಿ ಮಾಡಿ ನಂತರ ಫಲಿತಾಂಶ ಪ್ರಕಟಿಸಿದ್ದರೆ 4 ಕೋಟಿ ಆದಾಯ ವಿಶ್ವವಿದ್ಯಾಲಯಕ್ಕೆ ಬರುತಿತ್ತು ಆಗ ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿ ಸುಧಾರಿಸುತಿತ್ತು ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಸರ್ಕಾರ ಅತಿಥಿ ಉಪನ್ಯಾಸಕರಿಗೆ ಯಾವ ವೇತನ ನಿಗದಿ ಮಾಡಿದೆಯೋ ಅದನ್ನು ಜಾರಿ ಮಾಡೋಣ ಎಂದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಅತಿಥಿ ಉಪನ್ಯಾಸಕರಿಗೆ ಪ್ರಸ್ತುತ ಇರುವ ವೇತನವನ್ನೇ ನೀಡಲು ಹಣದ ಕೊರತೆ ಇದೆ ಎಂದರು.

ಸದಸ್ಯರಾದ ಡಾ. ಧನಂಜಯ್. ಬಿ.ಜಿ. ರವರು ಮಾತನಾಡಿ ಏಪ್ರಿಲ್ ನಿಂದ ಜಾರಿಗೆ ತರಬಹುದು ಎಂದರು. ಜೇಷ್ಠತೆಯನುಸಾರ ಹಿರಿಯರಿಗೆ 16 ಘಂಟೆ ಬೋಧನಾವಧಿ ನೀಡಿ ಉಳಿದವರಿಗೆ ನಂತರದ ಅವಧಿ ಹಂಚಿಕೆ ಮಾಡಬೇಕಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ನಟೇಶ್ ರವರು ಮಾತನಾಡಿ ಜೇಷ್ಠತೆಯನುಸಾರ ಹಿರಿಯರಿಗೆ 16 ಘಂಟೆ ಬೋಧನಾವಧಿ ನೀಡಿದರೆ ಉಳಿದವರಿಗೆ ಬೋಧನಾವಧಿ ಕೊರತೆಯಾಗಬಹುದು ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಸಮಿತಿಯು ಈ ಬಗ್ಗೆ ಪರಿಶೀಲಿಸಿಯೇ ವರದಿ ನೀಡಿದೆ ಎಂದರು. ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗದಿಂದ ಅತಿಥಿ ಉಪನ್ಯಾಸಕರ ಪಟ್ಟಿಯನ್ನು ತರಿಸಿಕೊಂಡು ಜೇಷ್ಠತೆಯನುಸಾರ ಪರಿಶೀಲಿಸಿ ಬೋಧನಾವಧಿ ಹಂಚಿಕೆ ಮಾಡಬೇಕು ಎಂದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಹಿಂದಿನ ವರ್ಷ ಇದೇ ರೀತಿ ಹೆಚ್ಚುವರಿ ಖರ್ಚುಗಳು ಬಂದಿರುವುದರಿಂದ ಈ ವರ್ಷ ರೂಪಾಯಿ ಏಳುವರೆ ಕೋಟಿ ಬಜೆಟ್ ಕೊರತೆಯಾಗಿದೆ ಇದರಿಂದ ಪ್ರಸ್ತುತ ಅತಿಥಿ ಉಪನ್ಯಾಸಕರಿಗೆ 2 ತಿಂಗಳ ವೇತನ ಕೊಡಲು ಹಣ ಇರುವುದಿಲ್ಲ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ವಿಷಯವನ್ನು ಹಣಕಾಸು ಸಮಿತಿ ಸಭೆಯ ಗಮನಕ್ಕೆ ತಂದು ನಂತರ ಕ್ರಮ ಕೈಗೊಳ್ಳಬಹುದು ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಮತ್ತು ಸಂಭಾವನೆ ಪರಿಷ್ಕರಣೆ ಕುರಿತಂತೆ ರಚಿಸಲಾದ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ಸಭೆಯ ಗಮನಕ್ಕೆ ತಂದರು.

1. ಪ್ರಸ್ತುತ ಅತಿಥಿ ಉಪನ್ಯಾಸಕರುಗಳಿಗೆ ನೀಡಲಾಗುತ್ತಿರುವ ವೇತನ/ಸಂಭಾವನೆಯನ್ನು ಕೆಳಕಂಡಂತೆ ಹೆಚ್ಚಿಸಬೇಕು.

| | | |
|---|---|---|
| 1 | 15 ವರ್ಷ ಮತ್ತು 15 ವರ್ಷಗಳಿಗಿಂತಲೂ ಹೆಚ್ಚಿನ ಸೇವೆ ಸಲ್ಲಿಸಿರುವ ಹಾಗೂ ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರಿಗೆ | ರೂ. 45000–00 |
| 2 | 15 ವರ್ಷ ಮತ್ತು 15ವರ್ಷಗಳಿಗಿಂತಲೂ ಹೆಚ್ಚಿನ ಸೇವೆ ಸಲ್ಲಿಸಿರುವ ಹಾಗೂ ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆ ಹೊಂದಿಲ್ಲದೇ ಇರುವ ಅತಿಥಿ ಉಪನ್ಯಾಸಕರಿಗೆ | ರೂ. 40000–00 |

| | | |
|---|---|---|
| 3 | 10 ವರ್ಷ ಮತ್ತು 10 ವರ್ಷಗಳಿಗಿಂತಲೂ ಹೆಚ್ಚಿನ ಸೇವೆ ಸಲ್ಲಿಸಿರುವ ಹಾಗೂ 15 ವರ್ಷಗಳಿಗಿಂತ ಕಡಿಮೆ ಸೇವೆ ಸಲ್ಲಿಸಿರುವ ಮತ್ತು ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರಿಗೆ | ರೂ. 38000-00 |
| 4 | 10 ವರ್ಷ ಮತ್ತು 10 ವರ್ಷಗಳಿಗಿಂತಲೂ ಹೆಚ್ಚಿನ ಸೇವೆ ಸಲ್ಲಿಸಿರುವ ಹಾಗೂ 15 ವರ್ಷಗಳಿಗಿಂತ ಕಡಿಮೆ ಸೇವೆ ಸಲ್ಲಿಸಿರುವ ಮತ್ತು ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆ ಹೊಂದಿಲ್ಲದೇ ಇರುವ ಅತಿಥಿ ಉಪನ್ಯಾಸಕರಿಗೆ | ರೂ. 36000-00 |
| 5 | 05 ವರ್ಷ ಮತ್ತು 5 ವರ್ಷಗಳಿಗಿಂತಲೂ ಹೆಚ್ಚಿನ ಸೇವೆ ಸಲ್ಲಿಸಿರುವ ಹಾಗೂ 10 ವರ್ಷಗಳಿಗಿಂತ ಕಡಿಮೆ ಸೇವೆ ಸಲ್ಲಿಸಿರುವ ಮತ್ತು ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರಿಗೆ | ರೂ.35000-00 |
| 6 | 5ವರ್ಷ ಮತ್ತು 5 ವರ್ಷಗಳಿಗಿಂತಲೂ ಹೆಚ್ಚಿನ ಸೇವೆ ಸಲ್ಲಿಸಿರುವ ಹಾಗೂ 10 ವರ್ಷಗಳಿಗಿಂತ ಕಡಿಮೆ ಸೇವೆ ಸಲ್ಲಿಸಿರುವ ಮತ್ತು ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆ ಹೊಂದಿಲ್ಲದೇ ಇರುವ ಅತಿಥಿ ಉಪನ್ಯಾಸಕರಿಗೆ | ರೂ. 33000-00 |
| 7 | 5 ವರ್ಷಗಳಿಗಿಂತ ಕಡಿಮೆ ಸೇವೆ ಸಲ್ಲಿಸಿರುವ ಮತ್ತು ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರಿಗೆ | ರೂ. 31000-00 |
| 8 | 5 ವರ್ಷಗಳಿಗಿಂತ ಕಡಿಮೆ ಸೇವೆ ಸಲ್ಲಿಸಿರುವ ಮತ್ತು ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆ ಹೊಂದಿಲ್ಲದೇ ಇರುವ ಅತಿಥಿ ಉಪನ್ಯಾಸಕರಿಗೆ | ರೂ. 30000-00 |

2. ಅತಿಥಿ ಉಪನ್ಯಾಸಕರುಗಳಿಗೆ ಪಿ.ಎಫ್. ಮತ್ತು ಇ.ಎಸ್.ಐ. ಸೌಲಭ್ಯಗಳನ್ನು ಒದಗಿಸುವ ಸಂಬಂಧ ತಜ್ಞರೊಂದಿಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಬೇಕು.
3. ಸಂಬಂಧಿಸಿದ ವಿಭಾಗಗಳ ಮುಖ್ಯಸ್ಥರುಗಳಿಂದ ಅತಿಥಿ ಉಪನ್ಯಾಸಕರುಗಳ ಜ್ಯೇಷ್ಠತಾ ಪಟ್ಟಿಯನ್ನು ಪಡೆದು, ಬೋಧನಾ ಕಾರ್ಯಭಾರ ಹಂಚಿಕೆಯಾಗುವಾಗ ಜೇಷ್ಠತೆಯಲ್ಲಿ ಹಿರಿಯರಾದವರಿಗೆ ಪೂರ್ಣ ಕಾರ್ಯಭಾರ ಮತ್ತು ನಂತರದ ಅತಿಥಿ ಉಪನ್ಯಾಸಕರುಗಳಿಗೆ ಲಭ್ಯತೆ ಇರುವ ಕಾರ್ಯಭಾರದ ಹಂಚಿಕೆಗೆ ಕ್ರಮ ಕೈಗೊಳ್ಳಲು ನಿರ್ದೇಶಿಸುವುದು.
4. ಅತಿಥಿ ಉಪನ್ಯಾಸಕರುಗಳನ್ನು 12 ತಿಂಗಳಿಗೆ ನೇಮಿಸಿ, ಒಂದು ದಿನ ಬಿಡುಗಡೆಗೊಳಿಸಿ, ಮತ್ತೆ ಸೇವೆಯಲ್ಲಿ ಮುಂದುವರೆಸುವಂತೆ ಆದೇಶವನ್ನು ಹೊರಡಿಸಬೇಕು. ಹಾಗೂ ಬೋಧನಾ ಕಾರ್ಯಭಾರ ಕಡಿಮೆ ಇರುವ ತಿಂಗಳುಗಳಲ್ಲಿ ಅವರ ಸೇವೆಯನ್ನು ಇತರೆ ಶೈಕ್ಷಣಿಕ ಚಟುವಟಿಕೆಗಳಾದ ಮೌಲ್ಯಮಾಪನ, ಪ್ರವೇಶಾತಿ ಮುಂತಾದ ಕಾರ್ಯಗಳಿಗೆ ಯಾವುದೇ ಸಂಭಾವನೆಯಿಲ್ಲದೆ ಬಳಸಿಕೊಳ್ಳುವುದು
5. ಮಹಿಳಾ ಅತಿಥಿ ಉಪನ್ಯಾಸಕರುಗಳಿಗೆ 04 ತಿಂಗಳುಗಳ ವೇತನ ಸಹಿತ ಹೆರಿಗೆ ರಜೆಯನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳುವುದು
6. ಅತಿಥಿ ಉಪನ್ಯಾಸಕರುಗಳ ವೇತನದಲ್ಲಿ ಮೂಲದಲ್ಲಿಯೇ ಆದಾಯ ತೆರಿಗೆ ಕಟಾವಣೆ ವೇತನಕ್ಕೆ ಅನ್ವಯಿಸುವ ನಿಯಮದಡಿ ಮಾಡಬೇಕು.
7. ಅತಿಥಿ ಉಪನ್ಯಾಸಕರಿಗೆ ಪಿಹೆಚ್.ಡಿ. ಮಾರ್ಗದರ್ಶಕರಾಗಿ ಮಾನ್ಯತೆ ನೀಡುವ ಅವಕಾಶವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದು ಹಾಗೂ ಇದರಂತೆಯೇ ಬೇರೆ ಕಾಲೇಜುಗಳಲ್ಲಿರುವ ಪ್ರಾಧ್ಯಾಪಕರುಗಳಿಗೂ ಪಿಹೆಚ್.ಡಿ. ಮಾರ್ಗದರ್ಶಕರಾಗಿ ಮಾನ್ಯತೆ ನೀಡುವ ಬಗ್ಗೆ ಪರಿಶೀಲಿಸುವುದು.

8. ಹತ್ತು ವರ್ಷ ಮತ್ತು ಹೆಚ್ಚಿನ ವರ್ಷದಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಮೂರು ವರ್ಷಗಳಿಗೆ ನೇಮಕ ಮಾಡಿಕೊಂಡು ನಂತರ ಸಂದರ್ಶನದ ಮೂಲಕ ಪುನರ್ ನೇಮಕ ಮಾಡಿಕೊಳ್ಳಲು ಕ್ರಮವಹಿಸುವುದು.
9. ಹತ್ತು ವರ್ಷ ಮೇಲ್ಪಟ್ಟು ನಿರಂತರವಾಗಿ ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಯು.ಜಿ.ಸಿ. ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು.
10. ತಿಂಗಳಿಗೆ ಒಂದು ಗಳಿಕೆ ರಜೆ ಸೌಲಭ್ಯ ದೊರಕಿಸಿಕೊಡುವುದು ಮತ್ತು ರಜೆ ಸೌಲಭ್ಯ ಬಳಸಿಕೊಳ್ಳದೆ ಇರುವವರಿಗೆ ವರ್ಷಾಂತ್ಯದಲ್ಲಿ ನಗದೀಕರಣಕ್ಕೆ ಅವಕಾಶ ಕಲ್ಪಿಸಿಕೊಡುವ ಬಗ್ಗೆ ಕ್ರಮಕೈಗೊಳ್ಳುವುದು.
11. ವೇತನ ಪಾವತಿಯಲ್ಲಿ ಯಾವುದೇ ವಿಳಂಬವಾಗದೇ ಇರುವ ಹಾಗೆ ಬಿಲ್ಲಿಂಗ್ ಸಿಸ್ಟಮ್‌ನ್ನು ಕಂಪ್ಯೂಟರೀಕರಣಗೊಳಿಸಿ, ಪ್ರತಿ ಮಾಹೆಯಾನ ದಿನಾಂಕ 30ಕ್ಕೆ ವೇತನ ಪಾವತಿಸಲು ಕ್ರಮ ಕೈಗೊಳ್ಳುವುದು.

ಇಷ್ಟು ಶಿಫಾರಸ್ಸುಗಳನ್ನು ಮಾಡಲಾಗಿದೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಅತಿಥಿ ಉಪನ್ಯಾಸಕರಿಗೆ ಗಳಿಕೆ ರಜೆ ನೀಡಲು ಬರುವುದಿಲ್ಲ, ಕೆ.ಸಿ.ಎಸ್.ಆರ್ ನಿಯಮದ ಪ್ರಕಾರ ಗಳಿಕೆ ರಜೆಯನ್ನು ಖಾಯಂ ನೌಕರರಿಗೆ ಮಾತ್ರ ನೀಡಲಾಗುತ್ತದೆ ಎಂದರು.

ಕುಲಸಚಿವರು ಮಾತನಾಡಿ 12 ತಿಂಗಳು ವೇತನ ನೀಡಿದರೆ ಅಡಿಟ್ ಆಕ್ಷೇಪಣೆಯಾಗುತ್ತದೆ. ಕೊರೋನಾ ಸಮಯದಲ್ಲಿ 11 ತಿಂಗಳು ವೇತನ ಪಾವತಿಸಿದ್ದಕ್ಕೆ ಅಡಿಟ್ ಆಕ್ಷೇಪಣೆಯಾಗಿದೆ ಎಂದರು. ಅದನ್ನು ಸರಿಪಡಿಸಲು ಎಲ್ಲಾ ವಿಭಾಗದವರಿಂದ ಬೋಧನಾವದಿ ಸಮತೋಲನ ಮಾಡಿ ವೇತನ ಪಾವತಿಸಲಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಕೆಲವೊಮ್ಮೆ ಖಾಯಂ ಉಪನ್ಯಾಸಕರಿಗೂ ಬೋಧನಾವಧಿ ಇಲ್ಲದ್ದಾಗ್ಯೂ ವೇತನ ಕೊಡಲಾಗುತ್ತದೆ. ಹಾಗಾಗಿ ಅತಿಥಿ ಉಪನ್ಯಾಸಕರಿಗೆ ವೇತನ ಪಾವತಿಸಿದ್ದಕ್ಕೆ ಅಡಿಟ್ ಆಕ್ಷೇಪಣೆ ಆಗುವ ಸಂಭವ ಕಡಿಮೆ ಎಂದು ಹೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಖಾಯಂ ಉಪನ್ಯಾಸಕರಿಗೆ ವೇತನ ಪಾವತಿಸಲು ಸರ್ಕಾರದಿಂದ ಅನುದಾನ ಬರುತ್ತದೆ ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಏಜೆನ್ಸಿ ನೌಕರರಿಗೂ 12 ತಿಂಗಳು ವೇತನ ಪಾವತಿಸಲಾಗುತ್ತದೆ ಆದರೆ ಅತಿಥಿ ಉಪನ್ಯಾಸಕರು ಮಾತ್ರ 10 ತಿಂಗಳು ಮಾತ್ರ ವೇತನ ತೆಗೆದುಕೊಂಡು ತೊಂದರೆ ಅನುಭವಿಸುತ್ತಾರೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸರ್ಕಾರವೇ ಹತ್ತು ತಿಂಗಳು ಮಾಡಿದೆ ನಾವು ಹೇಗೆ 12 ತಿಂಗಳು ಸಂಬಳ ನೀಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ವಿಭಾಗಗಳಲ್ಲಿ 11 ತಿಂಗಳು ಕೆಲಸವಿರುತ್ತದೆ. 01 ತಿಂಗಳು ಕೆಲಸ ಇರುವುದಿಲ್ಲ. ಆದರೆ ಕಲಾ/ವಾಣಿಜ್ಯ ವಿಷಯದ ವಿಭಾಗಗಳಲ್ಲಿ 02 ತಿಂಗಳು ಪೂರ್ತಿ ಕೆಲಸ ಇರದೇ ಇರಬಹುದು ಎಂದು ಹೇಳಿದರು.

ಆದರೆ ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥ್ ಮತ್ತು ಶ್ರೀ ಧರ್ಮಪ್ರಸಾದ್‌ರವರು ಇದಕ್ಕೆ ಒಪ್ಪಲಿಲ್ಲ.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಯಾವುದೇ ಕಾನೂನಾತ್ಮಕ ಸಮಸ್ಯೆ ಬರುವುದಿಲ್ಲ. ಹನ್ನೆರಡು ತಿಂಗಳು ಸಂಬಳ ಕೊಡಿ. ಇದರಿಂದ ಅತಿಥಿ ಉಪನ್ಯಾಸಕರು ಸಂತೋಷಪಡುತ್ತಾರೆ. ನೌಕರರು ಸಂತೋಷವಾಗಿರುವ ಸಂಸ್ಥೆ ಬೆಳೆಯುತ್ತದೆ ಎಂದು ಹೇಳಿದರು.

ಮಾನ್ಯಕುಲಪತಿಗಳು ನಾನು ಇದನ್ನು ಹಣಕಾಸು ಸಮಿತಿ ಸಭೆಯಲ್ಲಿ ಚರ್ಚೆ ಮಾಡುತ್ತೇನೆ ಎಂದರು. ಕುಲಸಚಿವರು ಕೂಡ ಇದನ್ನು ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಹಣಕಾಸು ಸಮಿತಿ ಸಭೆಗೆ ಇದನ್ನೆಲ್ಲಾ ಪ್ರತ್ಯೇಕವಾಗಿ ಇಡಬೇಕಾಗಿಲ್ಲ, ಒಟ್ಟು ವೇತನದಲ್ಲಿ ಸೇರಿಸಿ ಹಣಕಾಸು ಸಮಿತಿಗೆ ಇಡಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥ್‌ರವರು ಮಾತನಾಡಿ ಅತಿಥಿ ಉಪನ್ಯಾಸಕರಿಗೆ ವೃತ್ತಿ ತೆರಿಗೆ (Professional Tax) ಕಟಾವಣೆ ಮಾಡುವುದು ತಪ್ಪು ಅವರಿಗೆ ನೀಡುವುದು ಗೌರವ ಧನ ಅಲ್ಲ ವೇತನ ಎಂದು ಹೇಳಿದರು. ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಇದನ್ನು ಪರಿಶೀಲಿಸುವಂತೆ ಹಣಕಾಸು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ವೃತ್ತಿ ತೆರಿಗೆ (Professional Tax) ಕಟಾವಣೆಯ ಕುರಿತು ಚಾರ್ಟಡ್ ಅಕೌಂಟೆಂಟ್‌ರವರಿಂದ ಸ್ಪಷ್ಟೀಕರಣ ಪಡೆಯುವಂತೆ ಸೂಚಿಸಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಪಿಹೆಚ್.ಡಿ ಮಾರ್ಗದರ್ಶಕರಾಗಲು ಬೋಧನೆಯಲ್ಲಿ ಐದು ವರ್ಷ ಸೇವೆ ಸಲ್ಲಿಸಿರಬೇಕು. ಮೂರು ಸಂಶೋಧನಾ ಪತ್ರಿಕೆಗಳನ್ನು ಪ್ರಕಟಿಸಿರಬೇಕು. ಘನತೆವೆತ್ತ ರಾಜ್ಯಪಾಲರಿಂದ ಪರಿನಿಯಮ ಅನುಮೋದನೆಯಾಗಬೇಕು ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಕುವೆಂಪು ವಿಶ್ವವಿದ್ಯಾಲಯದಲ್ಲಿಯೇ ಈ ಹಿಂದೆ ಡಾ. ಮೋಹನ್‌ರಾಮ್, ಎಂಬ ಉಪನ್ಯಾಸಕರಿದ್ದರು ಅವರನ್ನು ಎಲ್.ಎಲ್.ಎಂ ಗೈಡ್ ಆಗಿ ನೇಮಕ ಮಾಡಲಾಗಿತ್ತು ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಮಾಸಿಕ ಸಂಭಾವನೆಯನ್ನು ಪರಿಷ್ಕರಿಸಲು ಕುಲಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಸಲ್ಲಿಸಿದ ವರದಿಯನ್ನು ಸಭೆಯು ಕೆಲವೊಂದು ತಿದ್ದುಪಡಿಗಳೊಂದಿಗೆ ಅಂಗೀಕರಿಸಿದ್ದು, ಅದರಂತೆ ಸಂಭಾವನೆ/ವೇತನವನ್ನು ಪರಿಷ್ಕರಿಸಲು ಕ್ರಮ ಕೈಗೊಳ್ಳಲು ಹಾಗೂ ಸದರಿ ಅತಿಥಿ ಉಪನ್ಯಾಸಕರ ಬೇಡಿಕೆಗಳಲ್ಲಿ ಗಳಿಕೆ ರಜೆ ನೀಡುವ ವಿಷಯವನ್ನು ಹೊರತುಪಡಿಸಿ ಉಳಿದ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಕೆಲವು ಸೌಲಭ್ಯಗಳನ್ನು ವಿಸ್ತರಿಸಲು ನಿರ್ಣಯಿಸಿತು. ಹಾಗೂ ಅತಿಥಿ ಉಪನ್ಯಾಸಕರು ಹಾಗೂ ಆರ್.ಟಿ.ಎ. (ರೀಸರ್ಚ್ ಎಂಡ್ ಟೀಚಿಂಗ್ ಅಸಿಸ್ಟೆಂಟ್)ರವರ ಪದನಾಮವನ್ನು **"ಸಹ ಉಪನ್ಯಾಸಕರು (Teaching Assistant)"** ಎಂದು ಬದಲಾವಣೆ ಮಾಡಲು ನಿರ್ಣಯಿಸಿ, ಮೇಲ್ಕಂಡ ಎಲ್ಲಾ ಸೌಲಭ್ಯಗಳನ್ನು ದೂರ ಶಿಕ್ಷಣಕ್ಕೆ ನೇಮಕಗೊಂಡಿರುವ ಆರ್.ಟಿ.ಎ. (ರೀಸರ್ಚ್ ಎಂಡ್ ಟೀಚಿಂಗ್ ಅಸಿಸ್ಟೆಂಟ್) ಗಳಿಗೂ ಕೂಡ ಅನ್ವಯಿಸುವಂತೆ ತೀರ್ಮಾನಿಸಲಾಯಿತು.

## ಪರೀಕ್ಷಾ ವಿಭಾಗ

**2022-ಸಿಂ-1.17:** M/s KEONICS Bangalore – ಇವರ ಮೂಲಕ ವಿಶ್ವವಿದ್ಯಾಲಯದಲ್ಲಿ EDGS ಜಾರಿಗೊಳಿಸುವ ಸಂಬಂಧ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸುತ್ತಿರುವ ಕುರಿತು.

ಚರ್ಚೆ: ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ಈ ಹಿಂದೆ ಘನತೆವೆತ್ತ ರಾಜ್ಯಪಾಲರ ಕಛೇರಿಯಿಂದ EDGS ಜಾರಿಗೊಳಿಸುವಂತೆ ಆದೇಶ ಬಂದಿತ್ತು. ಈಗ ಈ ಆದೇಶವನ್ನು ಹಿಂಪಡೆದಿರುವುದಾಗಿ ಪುನ: ರಾಜ್ಯಪಾಲರ ಕಛೇರಿಯಿಂದಲೆ ಪತ್ರ ಬಂದಿದೆ ಎಂದು ತಿಳಿಸಿದರು. ಈಗಾಗಲೇ ಜಾರಿಗೆ ಬಂದಿದ್ದು ಕೆಲಸ ಪ್ರಾರಂಭಿಸಿರುವುದರಿಂದ, ಒಂದು ಕೋಟಿ ಮೂರು ಲಕ್ಷ ರೂಪಾಯಿಗಳ ಹುಂಡಿಯನ್ನು ಪಾವತಿಗಾಗಿ ಸಲ್ಲಿಸಿದ್ದು, EDGS ಗೆ ಒಂದು ಕೋಟಿ ಮೂರು ಲಕ್ಷ ಪಾವತಿ ಮಾಡಬೇಕು ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಸರ್ಕಾರದ ಸಾಫ್ಟ್‌ವೇರ್‌ಗಳು ಬಹಳ ಚೆನ್ನಾಗಿವೆ. ಅವುಗಳನ್ನು ಉಪಯೋಗಿಸುವುದನ್ನು ಬಿಟ್ಟು ಬೇರೆ ಸಾಫ್ಟ್‌ವೇರ್‌ಗಳನ್ನು ಹಣ ಕೊಟ್ಟು ತೆಗೆದುಕೊಂಡಿದ್ದೀರಿ. ವಿದ್ಯಾರ್ಥಿಗಳ ಡಾಟಾ ಹೊರಗುತ್ತಿಗೆಯವರ ಹತ್ತಿರ ಇದೆ, ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಗಳಾಗದ ರೀತಿಯಲ್ಲಿ ಹೊರಬರಬೇಕಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ EDGS ಜಾರಿಗೊಳಿಸಲು ಸಿಂಡಿಕೇಟ್ ಒಪ್ಪಿಗೆ ಕೊಟ್ಟಿರಲಿಲ್ಲ ಎಂದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಕೂಡ ಇದನ್ನೇ ಅನುಮೋದಿಸಿ ಯಾರೂ ಒಪ್ಪಿಗೆ ಕೊಟ್ಟಿರಲಿಲ್ಲ ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಇದು ಯಾವಾಗ ಜಾರಿಗೆ ಬಂದಿದೆ, ಎಷ್ಟು ಕಾರ್ಯನಿರ್ವಹಿಸಿದೆ ಎಂಬ ಬಗ್ಗೆ ಕೆಲಸ ನಿರ್ವಹಿಸಿದ ಅಂಕಿಅಂಶಗಳನ್ನು ಹಾಗೂ ಟೆಂಡರ್ ಡಾಕ್ಯುಮೆಂಟ್ ತರಿಸಿಕೊಂಡು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಯಾವ ಸೇವೆ ನೀಡಬೇಕು ಎಂದು ನಮೂದಿಸಿದೆ ಅದು ಆಗಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಸರಿಯಾಗಿದ್ದರೆ ಈಗ ಏನು ಕೆಲಸ ಆಗಿದೆ ಅದಕ್ಕೆ ಪಾವತಿ ಮಾಡಬಹುದು ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾಲಯದಲ್ಲಿ EDGS ಜಾರಿಗೊಳಿಸಿ ಎಂದು ರಾಜಭವನದಿಂದ ಪತ್ರ ಬಂದಿತ್ತು ದಿನಾಂಕ: 09-07-2020ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚೆ ಆಗಿ ಅನುಮೋದನೆ ಆಗಿತ್ತು ಎಂದು ಹೇಳಿದರು.

ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ EDGS ರದ್ದುಗೊಳಿಸಬಹುದು ಎಂದರು.

ಕುಲಸಚಿವರು ಮಾತನಾಡಿ M/s KEONICS Bangalore – ಇವರ ಮೂಲಕ ವಿಶ್ವವಿದ್ಯಾಲಯದಲ್ಲಿ EDGS ಜಾರಿಗೊಳಿಸುವಂತೆ ತಿಳಿಸಿರುವುದನ್ನು ಹಿಂಪಡೆದು ರದ್ದುಗೊಳಿಸಿರುವುದರಿಂದ ವಿಶ್ವವಿದ್ಯಾಲಯದಲ್ಲಿ ರದ್ದುಗೊಳಿಸಬಹುದು ಎಂದರು,

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಪರಿಶೀಲಿಸಿ ಕೆಲಸ ಆಗಿದೆಯಾ ನೋಡಿ ಮುಂದಿನ ಸಭೆಗೆ ಮಂಡಿಸಿ ಎಂದು ಹೇಳಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ M/s KEONICS Bangalore – ಇವರ ಮೂಲಕ ವಿಶ್ವವಿದ್ಯಾಲಯದಲ್ಲಿ EDGS ಜಾರಿಗೊಳಿಸಲು ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಗೊಳಿಸಲು ನಿರ್ಣಯಿಸಲಾಯಿತು. ಹಾಗೂ ಸದರಿ ಸಂಸ್ಥೆಯು ಈಗಾಗಲೇ ವಿಶ್ವವಿದ್ಯಾಲಯದಲ್ಲಿ ನಿರ್ವಹಿಸಿದ ಕಾರ್ಯಕ್ಕೆ ಸಲ್ಲಿಸಿರುವ ಹುಂಡಿಯ ಪಾವತಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸಿದ ವಹಿಯನ್ನು ಪರಿಶೀಲಿಸಿ ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಸರಿಯಾಗಿ ನಿರ್ವಹಿಸಿದ್ದಲ್ಲಿ ಪಾವತಿಗೆ ಅನುಮೋದನೆಗಾಗಿ ಮುಂದಿನ ಸಭೆಗೆ ಮಂಡಿಸುವಂತೆ ನಿರ್ಣಯಿಸಲಾಯಿತು.

**2022–ಸಿಂ–1.18:** ಈಗಾಗಲೇ ಇ-ಟೆಂಡರ್ ಮೂಲಕ ಪಡೆಯಲಾದ ಬಾಡಿಗೆ ವಾಹನಗಳ ದರಗಳನ್ನು ಪರಿಷ್ಕರಿಸುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಈಗಾಗಲೇ ಕರಾರು ಮಾಡಿಕೊಂಡಿರುವ ಮೆ. ಸಿದ್ಧಿ ವಿನಾಯಕ ಟ್ರಾವೆಲ್ಸ್, ಹೊಸಮನೆ ಶಿವಮೊಗ್ಗ ಇವರು ಮನವಿಯೊಂದನ್ನು ಸಲ್ಲಿಸಿ ಕರಾರು ಒಪ್ಪಂದ ಮಾಡಿಕೊಂಡ ಸಮಯದಲ್ಲಿ ಇದ್ದ ಡೀಸೆಲ್ ದರವು ತೀವ್ರವಾಗಿ ಹೆಚ್ಚಳವಾಗಿದ್ದು ವಾಹನ ಬಾಡಿಗೆ

ದರಗಳನ್ನು ಪ್ರತಿ ಕಿ.ಮೀ.ಗೆ ರೂ.7–00ರಿಂದ 8–00 ಹೆಚ್ಚಿಸಲು ಹಾಗೂ ಪ್ರತಿ ದಿನದ ಕನಿಷ್ಠ ಕಿ.ಮೀ.ಗಳನ್ನು 250 ಕಿ.ಮೀ. ಗಳಿಂದ 300 ಕಿ.ಮೀ. ಗೆ ಹೆಚ್ಚಿಸಲು ಕೋರಿರುತ್ತಾರೆ. ಆದರೆ ಕರಾರು ಒಪ್ಪಂದದಲ್ಲಿ ಟೆಂಡರ್ ಅವಧಿಯಲ್ಲಿ ಯಾವುದೇ ಕಾರಣಕ್ಕೂ ದರ ಪರಿಷ್ಕರಣೆಗೆ ಅವಕಾಶವಿರುವುದಿಲ್ಲ ಎಂದು ನಮೂದಿಸಲಾಗಿದೆ ಎಂದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್ ರವರು ಮಾತನಾಡಿ ಡೀಸೆಲ್ ದರ ಹೆಚ್ಚಳವಾಗಿರುವುದರಿಂದ ಮಾಡಬಹುದು ಎಂದರು. ಶ್ರೀಮತಿ ಕಿರಣ ರವೀಂದ್ರ ದೇಸಾಯಿಯವರು ಮಾತನಾಡಿ ಇನ್ನೆರಡು ತಿಂಗಳಲ್ಲಿ ಟೆಂಡರ್ ಅವಧಿಯು ಮುಗಿದು ಹೋಗುವುದರಿಂದ ಈಗ ತಿದ್ದುಪಡಿ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದರು. ಸದಸ್ಯರಾದ ಶ್ರೀ ರಮೇಶ್ ಬಾಬುರವರೂ ಕೂಡ ಇದನ್ನೇ ಅನುಮೋದಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಟೆಂಡರ್‌ದಾರರು ನನಗೆ ತುಂಬಾ ನಷ್ಟ ಆಗ್ತಾ ಇದೆ ದರ ಪರಿಷ್ಕರಣೆ ಮಾಡಿಕೊಡಿ ಎಂದು ಕೋರುತ್ತಿದ್ದಾರೆ ಎಂದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ ಟೆಂಡರ್ ಆದ ದಿನಕ್ಕೂ ಈ ದಿನಕ್ಕೂ ಎಷ್ಟು ವ್ಯತ್ಯಾಸವಾಗಿದೆ ಅದನ್ನು ಕೊಡಬಹುದು ಎಂದರು. ಶ್ರೀ ನಿರಂಜನಮೂರ್ತಿ ಬಿ.ರವರು ಮಾತನಾಡಿ ಕಿ.ಮೀ ಏರಿಸುವುದು ಬೇಡ ಆದರೆ ದರಗಳನ್ನು ಪ್ರತಿ ಕಿ.ಮೀ.ಗೆ ರೂ.7–00ರಿಂದ 8–00ಕ್ಕೆ ಹೆಚ್ಚಿಸಬಹುದು ಎಂದರು.

ಸದಸ್ಯರಾದ ಶ್ರೀಮತಿ ಕಿರಣ್ ದೇಸಾಯಿಯವರು ಹೀಗೆ ಮಾಡಬಹುದು ಎಂದರು. ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ಮೇ ವರೆಗೂ ಮಾತ್ರ ಒಪ್ಪಂದ ಇರುವುದರಿಂದ ನಂತರ ಏರಿಸಬಹುದು ಎಂದರು. ಇಲ್ಲವಾದಲ್ಲಿ ಮಂಜುನಾಥ್‌ರವರ ಸಲಹೆಯಂತೆ ವ್ಯತ್ಯಾಸದ ಮೊತ್ತ ಪಾವತಿಸಬಹುದು ಎಂದರು.

ಸದಸ್ಯರಾದ ಡಾ. ಅಶೋಕ್ ಡಿ. ರೇವಣ್‌ಕರ್‌ರವರು ಮಾತನಾಡಿ ಕರಾರಿನಲ್ಲಿ ಇರುತ್ತದೆ ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬಹುದು ಎಂದರು. ಕುಲಸಚಿವರು ಕೂಡ ಪರಿಶೀಲಿಸಬಹುದು ಎಂದರು. ನಂತರ ಒಪ್ಪಂದದಲ್ಲಿ ಈ ವಿಷಯ ಸೇರಿಲ್ಲ ಎಂದರು.

ಸದಸ್ಯರಾದ ಶ್ರೀ ರಮೇಶ್ ಬಾಬುರವರು ಮಾತನಾಡಿ ಅಡಿಟ್ ಆಕ್ಷೇಪಣೆ ಆಗುವುದಾದರೆ ಒಪ್ಪಂದ ಮುಗಿದ ನಂತರ ಮಾಡಬಹುದು ಎಂದರು. ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರೂ ಇದನ್ನು ಅನುಮೋದಿಸಿದರು. ಕುಲಸಚಿವ(ಪರೀಕ್ಷಾಂಗ)ರವರೂ ಕೂಡ ಮುಂದಿನ ಕರಾರು ಮಾಡುವಾಗ ಪರಿಶೀಲಿಸಬಹುದು ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಇ–ಟೆಂಡರ್ ಮೂಲಕ ಪಡೆಯಲಾದ ಬಾಡಿಗೆ ವಾಹನಗಳ ದರಗಳನ್ನು ಪರಿಷ್ಕರಿಸುವ ಕುರಿತು ಕರಾರು ಒಪ್ಪಂದದಲ್ಲಿ ಟೆಂಡರ್ ಅವಧಿಯಲ್ಲಿ ಯಾವುದೇ ಕಾರಣಕ್ಕೂ ದರ ಪರಿಷ್ಕರಣೆಗೆ ಅವಕಾಶವಿರುವುದಿಲ್ಲ ಎಂದು ನಮೂದಿಸಿದ್ದು, ಈಗ ಪರಿಷ್ಕರಿಸಿದಲ್ಲಿ ಆಡಿಟ್ ಆಕ್ಷೇಪಣೆಯಾಗುವುದರಿಂದ ಹಾಗೂ ಒಪ್ಪಂದದ ಅವಧಿ ಇನ್ನು ಎರಡು ತಿಂಗಳು ಮಾತ್ರ ಉಳಿದಿರುವುದರಿಂದ ನಿಯಮಾನುಸಾರ ಮುಂದಿನ ಟೆಂಡರ್ ಕರೆಯುವಾಗ ಪರಿಶೀಲಿಸುವುದು ಎಂದು ನಿರ್ಣಯಿಸಲಾಯಿತು.

**2022–ಸಿಂ–1.19:** ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ Revaluation & Re-Total etc., Per Paper Fees ಗಳನ್ನು ಪರಿಷ್ಕರಿಸುವ ಕುರಿತು.

ಚರ್ಚೆ : ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ವಿವಿಧ ಪರೀಕ್ಷೆಗಳ ಪರೀಕ್ಷಾ ಶುಲ್ಕ, ಅಂಕಪಟ್ಟಿ ಹಾಗೂ ಇತರೆ ಪ್ರಮಾಣ ಪತ್ರಗಳ ಶುಲ್ಕಗಳನ್ನು ದಿ:24–03–2021ರಂದು

ಜರುಗಿದ ಸಿಂಡಿಕೇಟ್ ನಿರ್ಣಯದನುಸಾರ ಶೇಕಡಾ 10% ರಷ್ಟು ಹೆಚ್ಚಿಸಲಾಗಿದೆ ಆದರೆ ಮರು ಮೌಲ್ಯಮಾಪನ ಮತ್ತು ಮರು ಸಂಕಲನದ ಶುಲ್ಕಗಳನ್ನು ಹೆಚ್ಚು ಮಾಡದೇ ಇರುವುದರಿಂದ ಆಡಳಿತಾತ್ಮಕ ವೆಚ್ಚವನ್ನು ಸರಿದೂಗಿಸುವ ದೃಷ್ಟಿಯಿಂದ ಈಗ ಅದನ್ನು ಹೆಚ್ಚಿಸಲು ಪ್ರಸ್ತಾವನೆ ಮಂಡಿಸಲಾಗಿದೆ ಎಂದರು.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸದಸ್ಯರು ಯಾವ ಆಧಾರದ ಮೇಲೆ ಪ್ರಸ್ತುತ ಇರುವ ಶುಲ್ಕವನ್ನು ಇಷ್ಟೊಂದು ಏರಿಸಲು ಕಾರಣ ಏನು ಎಂದು ಕೇಳಿದರು. ಸದಸ್ಯರಾದ ಶ್ರೀ ನಟೇಶ್ ರವರು ಮಾತನಾಡಿ ಅಂಕಪಟ್ಟಿ ಶುಲ್ಕ ಪ್ರತಿ ಬಾರಿ ತೆಗೆದುಕೊಳ್ಳುತ್ತಾರೆ. ಆದರೆ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ನೀಡುವುದಿಲ್ಲ ಆದರೆ ಸದರಿ ವಿದ್ಯಾರ್ಥಿ ಅನುತ್ತೀರ್ಣಗೊಂಡ ಪತ್ರಿಕೆಗಳನ್ನು ತೆಗೆದುಕೊಂಡಾಗ ಪುನ: ಅಂಕಪಟ್ಟಿ ಶುಲ್ಕ ಪಾವತಿಸಬೇಕಾಗುತ್ತದೆ. ಅಲ್ಲದೇ ಮರುಮೌಲ್ಯಮಾಪನದ ಫಲಿತಾಂಶ ತಕ್ಷಣ ನೀಡುವುದಿಲ್ಲ. ಮತ್ತೆ ಪರೀಕ್ಷಾ ಅಂಕಪಟ್ಟಿ ಶುಲ್ಕ ತೆಗೆದುಕೊಳ್ಳಲಾಗುತ್ತದೆ ಇದರಿಂದ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ ಎಂದರು. ಮರುಮೌಲ್ಯಮಾಪನಕ್ಕೆ ರೂ.1000-00 ಶುಲ್ಕ ತೆಗೆದುಕೊಂಡು ಮರುಮೌಲ್ಯಮಾಪನದಲ್ಲಿ ಹೆಚ್ಚು ಅಂಕ ಬಂದರೆ ಮೌಲ್ಯಮಾಪಕರಿಗೆ ಶಿಕ್ಷೆ ಕೊಡುತ್ತೀರಾ ಎಂದರು.

ಸದಸ್ಯರಾದ ಶ್ರೀ ರಮೇಶ್ ಬಾಬುರವರು ಮಾತನಾಡಿ ವಿಶ್ವವಿದ್ಯಾಲಯಕ್ಕೆ ಆದಾಯ ಬರುವ ಹಾಗೆ ವಿದ್ಯಾರ್ಥಿಗಳಿಗೂ ಹೊರೆಯಾಗದಂತೆ ನೋಡಿಕೊಂಡು 10%, 20% ಹೆಚ್ಚಿಸಬಹುದು ಎಂದರು

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ 10%, 20% ಅಥವಾ 25% ಹೀಗೆ ಮರು ಮೌಲ್ಯಮಾಪನ ಮತ್ತು ಮರು ಸಂಕಲನದ ಶುಲ್ಕಗಳನ್ನು ಹೆಚ್ಚಿಸುವ ಕುರಿತು ಕ್ರಮ ಕೈಗೊಳ್ಳಬೇಕು ಎಂದರು.

ಕುಲಸಚಿವ(ಪರೀಕ್ಷಾಂಗ)ರವರು ಇದು ಸೂಕ್ಷ್ಮ ವಿಷಯವಾಗಿದ್ದು ಒಂದು ಸಮಿತಿ ರಚಿಸಬಹುದು ಎಂದರು

ಮಾನ್ಯ ಕುಲಪತಿಗಳು ಮಾತನಾಡಿ 4-5 ವರ್ಷಗಳಿಂದ ಪರಿಷ್ಕರಣೆ ಮಾಡಿಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಶೇಕಡಾವರು ಹೆಚ್ಚಿಸಲು ಕ್ರಮ ಕೈಗೊಂಡು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಿ ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಎಷ್ಟು ಶುಲ್ಕ ನಿಗದಿ ಮಾಡಿದ್ದಾರೆ ಎಂದು ಪರಿಶೀಲಿಸಿ ಶೇಕಡಾ 25%ರ ಮಿತಿಯೊಳಗೆ ಹೆಚ್ಚಿಸಲು ಕ್ರಮಕೈಗೊಳ್ಳಬಹುದು ಎಂದರು.

ಸದಸ್ಯರಾದ ಶ್ರೀ ಪಿ.ಬಿ. ರಾಜಶೇಖರ್‌ರವರು ಮಾತನಾಡಿ ಕಳೆದ ಬಾರಿಯಂತೆ ಚಿಕ್ಕಮಗಳೂರಿನಲ್ಲಿ ಮೌಲ್ಯಮಾಪನಕ್ಕೆ ಅವಕಾಶ ಮಾಡಬೇಕು ಎಂದು ಕೋರಿದರು.

ಕುಲಸಚಿವರು ಮಾತನಾಡಿ ಕಳೆದ ಬಾರಿ ಕೋವಿಡ್ ಇದ್ದ ಕಾರಣ ಒಂದೇ ಕಡೆ ಹೆಚ್ಚು ಜನ ಸೇರಬಾರದೆಂಬ ಕಾರಣಕ್ಕೆ ಚಿಕ್ಕಮಗಳೂರಿನಲ್ಲಿ ಮೌಲ್ಯಮಾಪನ ಕೇಂದ್ರ ನೀಡಲಾಗಿತ್ತು. ಈಗ ಪುನ: ನೀಡಿದರೆ ಭದ್ರತೆಯ ಸಮಸ್ಯೆಯಾಗಬಹುದು ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಈ ಬಗ್ಗೆ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ Revaluation & Re-Total etc., Per Paper ಎಷ್ಟು ಶುಲ್ಕ ನಿಗದಿ ಮಾಡಿದ್ದಾರೆ ಎಂಬ ಬಗ್ಗೆ ಪರಿಶೀಲಿಸಿ ವಿದ್ಯಾರ್ಥಿಗಳಿಗೆ ಹೊರೆಯಾಗದಂತೆ ಶೇಕಡಾ 25%ರ ಮಿತಿಯೊಳಗೆ ಪರಿಷ್ಕರಿಸಿ ಅನುಮೋದನೆಗಾಗಿ ಮುಂದಿನ ಸಭೆಗೆ ಮಂಡಿಸುವಂತೆ ತಿಳಿಸಲು ನಿರ್ಣಯಿಸಲಾಯಿತು.

**2022-ಸಿಂ-1.20 :** ಪರೀಕ್ಷಾ ಕಾರ್ಯಗಳನ್ನು ಹೊರಗುತ್ತಿಗೆಯ ಮೂಲಕ ನಿರ್ವಹಿಸುವ ಕುರಿತು.

ಚರ್ಚೆ : ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಪರೀಕ್ಷಾ ಕರಾರು ಒಪ್ಪಂದವು ದಿನಾಂಕ:12-06-2021ರಂದು ಕೊನೆಗೊಂಡಿರುತ್ತದೆ. ಈ ಸಂಬಂಧ ಟೆಂಡರ್ ಕರೆಯಲು ಕ್ರಮ ಕೈಗೊಂಡಾಗ ಮೆ॥ ಲಾಜಿಸಿಸ್ ಸಂಸ್ಥೆಯು ಕರ್ನಾಟಕ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತದೆ. ತಡೆಯಾಜ್ಞೆ ತೆರವಿಗೆ ಕ್ರಮ ಕೈಗೊಳ್ಳಲಾಗಿದೆ. ಆದರೆ ಪರೀಕ್ಷಾ ಕಾರ್ಯಗಳ ಮುಂದುವರಿಕೆ ಸಂಬಂಧ ದಿನಾಂಕ:13-08-2021ರಂದು ನಡೆದ ಸಿಂಡಿಕೇಟ್ ಸಭೆಯು ಹೊಸ ಟೆಂಡರ್ ಕರೆಯಲು ಹಾಗೂ ಈ ಪ್ರಕ್ರಿಯೆಯು ಪೂರ್ಣಗೊಂಡು ಹೊಸ ಟೆಂಡರ್ ಚಾಲ್ತಿಗೆ ಬರುವವರೆಗೆ ಈ ಹಿಂದೆ ಕಾರ್ಯ ನಿರ್ವಹಿಸುತ್ತಿರುವ ಮೆ॥ ಲಾಜಿಸಿಸ್ ಸಂಸ್ಥೆಯ ಸೇವೆಯನ್ನು ಮುಂದುವರೆಸಲು ನಿರ್ಣಯಿಸಲಾಗಿರುತ್ತದೆ. ಪ್ರಸ್ತುತ ನಡೆಸಬೇಕಾಗಿರುವ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷಾ ಕಾರ್ಯಗಳಿಗೆ ಮೆ॥ ಲಾಜಿಸಿಸ್ ಸಂಸ್ಥೆಯ ಕಾರ್ಯ ಅವಶ್ಯವಾಗಿರುತ್ತದೆ. ಅಲ್ಲದೆ ಸರ್ಕಾರದಿಂದ ಪ್ರಸ್ತುತ ಅಭಿವೃದ್ಧಿ ಪಡಿಸುತ್ತಿರುವ ಯು.ಯು.ಸಿ.ಎಂ.ಎಸ್. ತಂತ್ರಾಂಶವನ್ನು ಪರೀಕ್ಷೆ ಮತ್ತು ಮೌಲ್ಯಮಾಪನ ಕಾರ್ಯಗಳಿಗೆ ಬಳಕೆ ಮಾಡುವ ಕುರಿತು ಕೂಡ ನಿರ್ದೇಶನವಿರುವುದನ್ನು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಟೆಂಡರ್ ರದ್ದುಪಡಿಸಿ ಯು.ಯು.ಸಿ.ಎಮ್.ಎಸ್ ಜಾರಿಗೆ ತರಬೇಕು ಹೊರಗುತ್ತಿಗೆ ಸಂಸ್ಥೆಗಾಗಿ ಕೋಟಿಗಟ್ಟಲೆ ಹಣ ವ್ಯಯವಾಗುತ್ತಿದೆ. ಮೆ॥ ಲಾಜಿಸಿಸ್‌ನಿಂದ ಸೂಕ್ಷ್ಮವಾಗಿ ಹೊರಬರಬೇಕು. ಹೊರಗುತ್ತಿಗೆ ರದ್ದುಪಡಿಸಿದರೆ ಏನೇನು ಪರಿಣಾಮಗಳು ಉಂಟಾಗುತ್ತವೆ ಎಂಬುದನ್ನು ಪರಿಶೀಲಿಸಬೇಕು. ಹೊರಗುತ್ತಿಗೆ ರದ್ದುಪಡಿಸಿ ಯು.ಯು.ಸಿ.ಎಂ,ಎಸ್. ಜಾರಿಗೆ ತಂದರೆ ರೂ.10 ಕೋಟಿ ಉಳಿಯುತ್ತದೆ ಎಂದರು. ವಿಶ್ವವಿದ್ಯಾಲಯದಲ್ಲಿರುವ ಪರಿಣಿತರನ್ನು ಗುರುತಿಸಿ ಲಾಜಿಸಿಸ್ ಸಂಸ್ಥೆ ಮಾಡುತ್ತಿರುವ ಕಾರ್ಯವನ್ನು ನಿರ್ವಹಿಸಲು ಕ್ರಮಕೈಗೊಳ್ಳುವಂತೆ ತಿಳಿಸಬೇಕು ಸೂಕ್ತ ತರಬೇತಿ ನೀಡಬೇಕು ಎಂದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ 3 ಮತ್ತು 5ನೇ ಸೆಮಿಸ್ಟರ್ ಗೆ ಮಾತ್ರ ಮೆ.॥ ಲಾಜಿಸಿಸ್ ಸೇವೆ ಬಳಸಿಕೊಂಡು 1ನೇ ಸೆಮಿಸ್ಟರ್‌ಗೆ ಯು.ಯು.ಸಿ.ಎಮ್.ಎಸ್. ಜಾರಿಗೆ ತರಬೇಕು ಆಗ ಎಲ್ಲಾ ಸರಿಯಾಗುತ್ತದೆ ಎಂದೆರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಯು.ಯು.ಸಿ.ಎಂ.ಎಸ್. ಜಾರಿಗೆ ತರಲಾಗಿದೆ. ತುಂಬಾ ಚೆನ್ನಾಗಿದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಯು.ಯು.ಸಿ.ಎಮ್.ಎಸ್. ತಂತ್ರಾಂಶವನ್ನು ಯಾವ ವಿಶ್ವವಿದ್ಯಾಲಯದಲ್ಲೂ ಜಾರಿಗೆ ತಂದಿಲ್ಲ ಇದಕ್ಕೆ ಯಾವಾಗಲೂ ಇಂಟರ್ ನೆಟ್ ಮತ್ತು ವೈ ಫೈ ಬೇಕಾಗುತ್ತದೆ ಎಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಥಮ ಸೆಮಿಸ್ಟರ್‌ಗೆ ಮಾತ್ರ ಯು.ಯು.ಸಿ.ಎಮ್.ಎಸ್. ತಂತ್ರಾಂಶ ಇದೆ, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷಾ ಕಾರ್ಯಗಳಿಗೆ ಮೆ॥ ಲಾಜಿಸಿಸ್ ಸಂಸ್ಥೆಯ ಸೇವೆಯನ್ನೇ ಬಳಸಲಾಗುತ್ತದೆ ಎಂದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ಹಂತ ಹಂತವಾಗಿ ಜಾರಿಗೆ ತನ್ನಿ ಎಂದರು ಶೀಮತಿ ಕಿರಣ್ ರವೀಂದ್ರ ದೇಸಾಯಿಯವರು ಕೂಡ ಇದನ್ನು ಅನುಮೋದಿಸಿದರು.

ಸದಸ್ಯರಾದ ಶ್ರೀ ನಟೇಶ್‌ರವರು ಮಾತನಾಡಿ ಯು.ಯು.ಸಿ.ಎಮ್.ಎಸ್. ತಂತ್ರಾಂಶದಲ್ಲಿ ತುಂಬಾ ಗೊಂದಲಗಳಿವೆ ಎಂದರು. ಶ್ರೀ ರಾಜಶೇಖರ್‌ರವರು ಮಾತನಾಡಿ ಒಬ್ಬರ ಪೋಟೋ ಅಪ್ ಲೋಡ್ ಮಾಡಿದರೆ ಇನ್ನಾರದ್ದೋ ಪೋಟೋ ಬಂದಿರುತ್ತದೆ ಎಂದರು.

ಸದಸ್ಯರಾದ ಡಾ ಬಿ.ಜಿ. ಧನಂಜಯ್ ರವರು ಮಾತನಾಡಿ ಇದಕ್ಕೆ ಪ್ರತ್ಯೇಕ ವಿಂಗ್ ಮಾಡಿ ಎಲ್ಲರಿಗೂ ಸೂಕ್ತ ತರಬೇತಿ ಕೊಡಬೇಕು ಎಂದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಮಾತನಾಡಿ ತಂತ್ರಾಂಶ ಗೊತ್ತಿರುವವರಿಂದ ಮಾಡಿಸಬೇಕು ಎಂದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥರವರು ಮಾತನಾಡಿ ಕುಲಸಚಿವ(ಪರೀಕ್ಷಾಂಗ)ರವರು ಇದರ ಜವಾಬ್ದಾರಿ ತೆಗೆದುಕೊಂಡು ಕೂಡಲೇ ಎಲ್ಲರಿಗೂ ಟ್ರೈನಿಂಗ್ ಕೊಡಿಸಬೇಕು ಎಂದರು.

ಸದಸ್ಯರಾದ ರಿಯಾಜ್ ಮಹಮೂದ್‌ರವರು ಮಾತನಾಡಿ 2021-22ನೇ ಶೈಕ್ಷಣಿಕ ಸಾಲಿನಿಂದ ಹೊಸ ಶಿಕ್ಷಣ ನೀತಿ ಜಾರಿಗೆ ಬಂದಿರುವುದರಿಂದ ಪ್ರಥಮ ಸೆಮಿಸ್ಟರ್‌ಗೆ ಮಾತ್ರ ಯು.ಯು.ಸಿ.ಎಮ್.ಎಸ್. ತಂತ್ರಾಂಶವನ್ನು ಜಾರಿ ಮಾಡಿ ಪ್ರಸ್ತುತ ನಡೆಯಲಿರುವ 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷಾ ಕಾರ್ಯಗಳಿಗೆ ಮೆ॥ ಲಾಜಿಸಿಸ್ ತಂತ್ರಾಂಶ ಉಪಯೋಗಿಸಬಹುದು ಎಂದು ಹೇಳಿದರು. ಸರ್ಕಾರ ಯು.ಯು.ಸಿ.ಎಮ್.ಎಸ್ ತಂತ್ರಾಂಶದ ಕುರಿತು ತರಬೇತಿ ಕೊಡ್ತಾ ಇದೆ. ವಿಶ್ವವಿದ್ಯಾಲಯವು ಸಿಬ್ಬಂದಿಗಳಿಗೆ ಮೊದಲು ತರಬೇತಿ ಕೊಟ್ಟು ನಂತರ ಪ್ರಾಂಶುಪಾಲರುಗಳಿಗೆ ತರಬೇತಿ ಕೊಡಬಹುದು ಎಂದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಪ್ರಸ್ತುತ ಮೆ. ಲಾಜಿಸಿಸ್ ಟೆಂಡರ್ ಅವಧಿ ಕೊನೆಗೊಂಡಿದೆ, ಹೊಸ ಟೆಂಡರ್ ಕರೆದಿದ್ದು ಅದಕ್ಕೆ ಮೆ. ಲಾಜಿಸಿಸ್ ಸಂಸ್ಥೆಯವರು ತಡೆಯಾಜ್ಞೆ ತಂದಿದ್ದಾರೆ. ತಡೆಯಾಜ್ಞೆ ತೆರವುಗೊಂಡರೆ ಹೊಸ ಟೆಂಡರ್ ಮಾಡಬೇಕೋ ಅಥವಾ ಬೇಡವೋ ಎಂದು ಕೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಟೆಂಡರ್ ಅವಧಿ ಮುಗಿದಿರುವುದರಿಂದ ಯು.ಯು.ಸಿ.ಎಮ್.ಎಸ್. ತಂತ್ರಾಂಶವನ್ನು ಜಾರಿಗೆ ತರಬೇಕು ಎಂದರು.

ಸದಸ್ಯರಾದ ಶ್ರೀಮತಿ ಭಾರತಿಯವರು ಮಾತನಾಡಿ ಹೊಸ ಶಿಕ್ಷಣ ನೀತಿಯ ಪಠ್ಯಕ್ರಮದಲ್ಲಿರುವ ಡಿಜಿಟಲ್ ಫ್ಲೂಯೆನ್ಸಿ ವಿಷಯದ ಪಾಠ ಇದುವರೆಗೂ ಆಗಿಲ್ಲ ಹೇಗೆ ನಾವು ಪರೀಕ್ಷೆ ಮಾಡಬೇಕು ಎಂದರು.

ಕುಲಸಚಿವರು ಮಾತನಾಡಿ ಪಠ್ಯಕ್ರಮ ಆಗಿರುವುದಿಲ್ಲ ಎಂಬ ಕಾರಣಕ್ಕಾಗಿ ಸರ್ಕಾರವು ಶೈಕ್ಷಣಿಕ ಅವಧಿಯನ್ನು ಒಂದು ತಿಂಗಳು ಮುಂದೂಡಿದೆ ಎಂದರು.

ಸದಸ್ಯರಾದ ಶ್ರೀ ನಟೇಶ್‌ರವರು ಮಾತನಾಡಿ ಪ್ರಥಮ ಸೆಮಿಸ್ಟರ್‌ಗೆ ಮಾತ್ರ ಯು.ಯು.ಸಿ.ಎಂ.ಎಸ್. ಜಾರಿ ಮಾಡಬಹುದು, 3 ಮತ್ತು 5ನೇ ಸೆಮಿಸ್ಟರ್‌ಗಳಿಗೆ ಯು.ಯು.ಸಿ.ಎಮ್.ಎಸ್. ಜಾರಿ ಮಾಡುವುದು ಕಷ್ಟವಾಗುತ್ತದೆ ಎಂದು ಹೇಳಿದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಮೆ॥ ಲಾಜಿಸಿಸ್ ಸಂಸ್ಥೆಯವರಿಗೆ ವಿಶ್ವವಿದ್ಯಾಲಯದ ವತಿಯಿಂದ ಒಂದು ಟಿಪ್ಪಣಿ ನೀಡಿ ಮೆ॥ ಲಾಜಿಸಿಸ್ ಸಂಸ್ಥೆಯವರು ಎಷ್ಟು ಪರೀಕ್ಷೆಗಳ ಕಾರ್ಯವನ್ನು ನಿರ್ವಹಿಸಬೇಕು. ಇಲ್ಲಿಯವರೆಗೆ ಸಂಸ್ಥೆಯವರು ಹೊಂದಿರುವ ಕುವೆಂಪು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಡಾಟಾಗಳನ್ನು ಸಂಪೂರ್ಣವಾಗಿ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಬೇಕು ಎಂದು ತಿಳಿಸಬಹುದು ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಪ್ರಥಮ ಸೆಮೆಸ್ಟರ್‌ಗೆ ಯು.ಯು.ಸಿ.ಎಂ.ಎಸ್. ಜಾರಿಗೆ ತಂದರೂ ಅದರ ಹಿಂದಿನ ಸೆಮಿಸ್ಟರ್‌ಗಳ ಎಲ್ಲಾ ಬ್ಯಾಚ್‌ಗಳೂ ಮುಗಿಯುವ ತನಕ ಮೆ॥ ಲಾಜಿಸಿಸ್ ಸಂಸ್ಥೆಯ ಸೇವೆ ಅಗತ್ಯವಿರುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಯು.ಯು.ಸಿ.ಎಂ.ಎಸ್. ಬಹಳ ಸರಳವಾಗಿದೆ ಅದನ್ನು ಜಾರಿ ಮಾಡಬೇಕು ಎಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಕಾನೂನಾತ್ಮಕವಾಗಿ ನಮಗೆ ಡಾಟಾ ಕೊಡಿ ಎಂದು ಮೆ. ಲಾಜಿಸಿಸ್ ಸಂಸ್ಥೆಯನ್ನು ಕೇಳಬೇಕು ಎಂದರು.

ಕುಲಸಚಿವರು ಮಾತನಾಡಿ ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ವಿದ್ಯಾರ್ಥಿಗಳ ಮಾಹಿತಿಯನ್ನು ಅಪ್ ಲೋಡ್ ಮಾಡಲಾಗುತ್ತಿದೆ. ಅದರಲ್ಲಿ ಏನಾದರೂ ತಿದ್ದುಪಡಿ ಹೇಳಿದರೆ ಪ್ರಾಂಶುಪಾಲರುಗಳು ಗಮನಿಸದಿರುವುದು ಕಂಡುಬಂದಿದೆ. ಆದ್ದರಿಂದ ಎಲ್ಲಾ ಪ್ರಾಂಶುಪಾಲರುಗಳೂ ಕೂಡ ಈ ಬಗ್ಗೆ ಗಮನವಹಿಸಬೇಕೆಂದು ಹೇಳಿದರು.

ಸದಸ್ಯರಾದ ಡಾ. ಧನಂಜಯ್‌ರವರು ಮಾತನಾಡಿ ಸರ್ಕಾರದ ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಕೆಲವು ಕೆಲಸಗಳನ್ನು ಕಡಿಮೆ ಅವಧಿಯಲ್ಲಿ ತಕ್ಷಣ ಮಾಡಿ ಎಂದರೆ ನಮಗೆ ಕಷ್ಟವಾಗುತ್ತದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಪ್ರಾಂಶುಪಾಲರುಗಳು ಯಾರೂ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ ಎಂಬ ದೂರ ಇದೆ ಎಂದು ಹೇಳಿದರು.

ಇದಕ್ಕೆ ಸದಸ್ಯರು ಹಾಗೂ ಪ್ರಾಂಶುಪಾಲರಾದ ಡಾ. ರಾಜಶೇಖರ್ ಪಿ.ಬಿ. ರವರು ಆಕ್ಷೇಪ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಕುಲಸಚಿವರು ಮತ್ತೊಮ್ಮೆ ತರಬೇತಿ ನೀಡಲಾಗುವುದು ಎಂದು ಹೇಳಿದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಹೊಸ ಶಿಕ್ಷಣ ನೀತಿಯು ಸ್ನಾತಕ ಪದವಿಗಳಿಗೆ ಮಾತ್ರ ಅಳವಡಿಸಲಾಗಿದ್ದು ಸ್ನಾತಕೋತ್ತರ ಪದವಿಗಳಿಗೆ ಅಳವಡಿಸಿಲ್ಲ. ಆದ್ದರಿಂದ ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯಗಳನ್ನು ಮೆ॥ ಲಾಜಿಸಿಸ್ ಸಂಸ್ಥೆಯಿಂದಲೇ ಮಾಡಿಸಲಾಗುತ್ತಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ರವರು ಮಾತನಾಡಿ ಹೊಸ ಟೆಂಡರ್ ಕರೆಯುವವರೆಗೆ ಮೆ. ಲಾಜಿಸಿಸ್ ಸಂಸ್ಥೆಯನ್ನೇ ಮುಂದುವರೆಸಬಹುದು. ಹೊಸ ಟೆಂಡರ್ ಕರೆದಾಗ ಮೆ॥ ಲಾಜಿಸಿಸ್ ಸಂಸ್ಥೆಗೆ ಮಾತ್ರ ಅನುಕೂಲವಾಗುವಂತೆ ಷರತ್ತುಗಳನ್ನು ವಿಧಿಸಬಾರದು ಎಂದರು.

ನಿರ್ಣಯ: 2021–22ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಶಿಕ್ಷಣ ನೀತಿ ಜಾರಿಗೆ ಬಂದಿರುವುದರಿಂದ ಪ್ರಥಮ ಸೆಮಿಸ್ಟರ್‌ಗೆ ಯು.ಯು.ಸಿ.ಎಮ್.ಎಸ್. ತಂತ್ರಾಂಶವನ್ನು ಸಮರ್ಪಕವಾಗಿ ಸೂಕ್ತ ರೀತಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಜಾರಿಗೆ ತರುವುದು. ಸ್ನಾತಕ ಪದವಿಯ 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷಾ ಕಾರ್ಯಗಳಿಗಾಗಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯಗಳಿಗೆ ಮಾತ್ರ, ಈಗಾಗಲೇ ಕರೆದಿರುವ ಟೆಂಡರ್‌ಗೆ ತಡೆಯಾಜ್ಞೆ ಇರುವುದರಿಂದ ತಡೆಯಾಜ್ಞೆ ತೆರವುಗೊಳಿಸಿ ಹೊಸದಾಗಿ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಬೇಕೆಂದು ಹಾಗೂ ಹೊಸ ಟೆಂಡರ್ ಜಾರಿಗೆ ಬರುವವರೆಗೆ ಮೆ॥ ಲಾಜಿಸಿಸ್ ಸಂಸ್ಥೆಯನ್ನೇ ಮುಂದುವರೆಸಬಹುದು ಎಂದು ನಿರ್ಣಯಿಸಲಾಯಿತು.

**2022–ಸಿಂ–1.21:** ಸ್ನಾತಕ (ರೆಗ್ಯೂಲರ್/ದೂರಶಿಕ್ಷಣ) ಪದವಿ ಪರೀಕ್ಷಾ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ / ಮೂರನೇ ಮೌಲ್ಯಮಾಪನ ಮತ್ತು ಸ್ನಾತಕೋತ್ತರ (ರೆಗ್ಯೂಲರ್/ದೂರಶಿಕ್ಷಣ) ಸವಾಲಿನ ಮೌಲ್ಯಮಾಪಕರಿಗೆ ಸಂಭಾವನಾ ದರ ಪರಿಷ್ಕರಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಸ್ನಾತಕ (ರೆಗ್ಯೂಲರ್/ದೂರಶಿಕ್ಷಣ) ಪದವಿ ಪರೀಕ್ಷಾ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ / ಮೂರನೇ ಮೌಲ್ಯಮಾಪನ ಮತ್ತು ಸ್ನಾತಕೋತ್ತರ (ರೆಗ್ಯೂಲರ್/ದೂರಶಿಕ್ಷಣ) ಸವಾಲಿನ ಮೌಲ್ಯಮಾಪಕರಿಗೆ ಸಂಭಾವನಾ ದರಗಳನ್ನು ಶೇಕಡಾ 25% ಹೆಚ್ಚಿಸಲು ನಿರ್ಣಯಿಸಲಾಯಿತು.

2022–ಸಿಂ–1.22: ಪ್ರಥಮ ವರ್ಷದ ಸ್ನಾತಕ ವಿದ್ಯಾರ್ಥಿಗಳಿಗೆ ಹೊಸ ಶಿಕ್ಷಣ ನೀತಿ ಅನ್ವಯ (NEP) ಪರೀಕ್ಷೆ ಮತ್ತು ಮೌಲ್ಯಮಾಪನದ ದರಗಳನ್ನು ಅನುಷ್ಠಾನಗೊಳಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಪ್ರಥಮ ವರ್ಷದ ಸ್ನಾತಕ ವಿದ್ಯಾರ್ಥಿಗಳಿಗೆ ಹೊಸ ಶಿಕ್ಷಣ ನೀತಿ ಅನ್ವಯ (NEP) ಪರೀಕ್ಷೆ ಮತ್ತು ಮೌಲ್ಯಮಾಪನದ ದರಗಳನ್ನು ಅನುಷ್ಠಾನಗೊಳಿಸಲು ಸಭೆಯು ತೀರ್ಮಾನಿಸಿತು ಹಾಗೂ ಪರೀಕ್ಷಾ ಅವಧಿ 2 ಗಂಟೆಗಳು ಇದ್ದು ಅದನ್ನು ಬೆಳಗಿನ ಅವಧಿ 10–00 ರಿಂದ 12–00 ಗಂಟೆ ಮತ್ತು ಅಪರಾಹ್ನ 2–00 ರಿಂದ 4–00 ಗಂಟೆ ಎಂದು ನಿಗದಿಪಡಿಸಲು ನಿರ್ಣಯಿಸಲಾಯಿತು.

2022–ಸಿಂ–1.23: ಪಿ.ಹೆಚ್.ಡಿ. ಕೋರ್ಸ್‌ವರ್ಕ್ ಪರೀಕ್ಷಾ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಕುವೆಂಪು ವಿಶ್ವವಿದ್ಯಾಲಯವು ನಡೆಸುವ ಕೋರ್ಸ್ ವರ್ಕ್ ಪರೀಕ್ಷೆಗಳ ಪರೀಕ್ಷಾ ಶುಲ್ಕ ಪರಿಷ್ಕರಿಸಬೇಕಾಗಿರುತ್ತದೆ ಪ್ರಸ್ತುತ ಸಾಮಾನ್ಯ ಅಭ್ಯರ್ಥಿಗಳಿಗೆ ರೂ. 1980/– ಹಾಗೂ ಎಸ್‌ಸಿ/ಎಸ್‌ಟಿ/ ಪ್ರವರ್ಗ–1ರ ಅಭ್ಯರ್ಥಿಗಳಿಗೆ ರೂ. 700/– ಇರುತ್ತದೆ ಎಂದು ಹೇಳಿದರು. ಈ ಕುರಿತು ಸದಸ್ಯರು ಒಂದೊಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಸಾಮಾನ್ಯ ಅಭ್ಯರ್ಥಿಗಳಿಗೆ ರೂ. 2500/– ಹಾಗೂ ಎಸ್‌ಸಿ/ಎಸ್‌ಟಿ/ ಪ್ರವರ್ಗ–1ರ ಅಭ್ಯರ್ಥಿಗಳಿಗೆ ರೂ. 1000/– ಮಾಡಬಹುದು ಎಂದರು. ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ರೂ. 3000/– ಮತ್ತು ರೂ. 1500/ ಮಾಡಬಹುದು.

ಮಾನ್ಯಕುಲಪತಿಗಳು ಸಾಮಾನ್ಯ ಅಭ್ಯರ್ಥಿಗಳಿಗೆ ರೂ. 4000/– ಹಾಗೂ ಎಸ್‌ಸಿ/ಎಸ್‌ಟಿ/ ಪ್ರವರ್ಗ–1ರ ಅಭ್ಯರ್ಥಿಗಳಿಗೆ ರೂ. 2000/– ಮಾಡಬಹುದು ಎಂದರು. ಇದಕ್ಕೆ ಎಲ್ಲ ಸದಸ್ಯರು ಒಪ್ಪಿದರು.

ಅಂತರ ರಾಷ್ಟ್ರೀಯ ವಿದ್ಯಾರ್ಥಿಗಳ ವಿಷಯ ಪ್ರಸ್ತಾಪವಾದಾಗ ಸದಸ್ಯರಾದ ಪ್ರೊ.ರಿಯಾಜ್ ಮಹಮೂದ್‌ರವರು ಮಾತನಾಡಿ ನಮ್ಮ ವಿಶ್ವವಿದ್ಯಾಲಯಕ್ಕೆ ಬರುವ ಅಂತರ ರಾಷ್ಟ್ರೀಯ ವಿದ್ಯಾರ್ಥಿಗಳು ಬಡ ದೇಶಗಳಾದ ಯಮನ್, ಕೀನ್ಯಾ ಮುಂತಾದ ದೇಶಗಳಿಂದ ಬಂದಿರುತ್ತಾರೆ. ಅವರಿಗೆ ವಿಶ್ವವಿದ್ಯಾಲಯದಿಂದ ಹಾಸ್ಟೆಲ್ ಅಥವಾ ಇತರೆ ಯಾವುದೇ ಸೌಲಭ್ಯಗಳನ್ನು ಪ್ರತ್ಯೇಕವಾಗಿ ಒದಗಿಸಿರುವುದಿಲ್ಲ. ಅವರಿಗೆ ಶಿಕ್ಷಣ ಕೊಡುತ್ತಿರುವುದಕ್ಕೆ 'ನ್ಯಾಕ್' ಸಮಿತಿ ಕೂಡ ಪ್ರಶಂಸೆ ಮಾಡಿರುತ್ತದೆ. ಆದ್ದರಿಂದ ದಿ:20–01–2020ರಿಂದ ಯಾವ ಶುಲ್ಕ ಜಾರಿಗೆ ಬಂದಿದೆಯೋ ಅದನ್ನು ಮುಂದುವರೆಸಬಹುದು ಎಂದು ಹೇಳಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಕುವೆಂಪು ವಿಶ್ವವಿದ್ಯಾಲಯವು ನಡೆಸುವ ಕೋರ್ಸ್ ವರ್ಕ್ ಪರೀಕ್ಷೆಗಳ ಪರೀಕ್ಷಾ ಶುಲ್ಕ ಪರಿಷ್ಕರಿಸಿ, ಸಾಮಾನ್ಯ ಅಭ್ಯರ್ಥಿಗಳಿಗೆ ರೂ.4000/– ಹಾಗೂ ಎಸ್‌ಸಿ/ಎಸ್‌ಟಿ/ ಪ್ರವರ್ಗ–1ರ ಅಭ್ಯರ್ಥಿಗಳಿಗೆ ರೂ. 2000/– ರಂತೆ ನಿಗದಿಪಡಿಸಲು ತೀರ್ಮಾನಿಸಲಾಯಿತು. ಹಾಗೂ ಅಂತರ ರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಮಾತ್ರ ದಿ:20–01–2020ರಿಂದ ಜಾರಿಗೆ ಬಂದಿರುವ ಶುಲ್ಕವನ್ನೇ ಮುಂದುವರೆಸಲು ನಿರ್ಣಯಿಸಲಾಯಿತು.

2022–ಸಿಂ–1.24 : ಮೇ:ಯುನಿಕ್ಲೇರ್ ಸಂಸ್ಥೆಯಿಂದ ಪಡೆದ e-governance ಸೇವೆಗಳ ಕುರಿತು.

ನಿರ್ಣಯ : ಚರ್ಚೆಯ ನಂತರ ಈ ವಿಷಯದ ಬಗ್ಗೆ e-governance ಸೇವೆಗಳ ಅವಶ್ಯಕತೆ ಏನು, ಯಾವ ಯಾವ ಸೇವೆಗಳು ಇದರಡಿಯಲ್ಲಿ ಬರುತ್ತವೆ ವಿಶ್ವವಿದ್ಯಾಲಯಕ್ಕೆ ಇದರಿಂದ ಅನುಕೂಲವಾಗುತ್ತದೆಯೇ, ಹಣಕಾಸು ಎಷ್ಟು ಬೇಕಾಗುತ್ತದೆ ಎಂಬ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕಾಗಿರುತ್ತದೆ ಆದ್ದರಿಂದ ಈ ಎಲ್ಲಾ ಮಾಹಿತಿಗಳೊಂದಿಗೆ ಮುಂದಿನ ಸಭೆಗೆ ಮಂಡಿಸಲು ತಿಳಿಸಿ ವಿಷಯವನ್ನು ಮುಂದೂಡಲಾಯಿತು.

## ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ

2022–ಸಿಂ–1.25: ಕಲಿಕಾರ್ಥಿ ಸೇವಾ ಕೇಂದ್ರಗಳ ಘೋಷಣೆ ಹಾಗೂ ರದ್ದುಪಡಿಸಲಾದ ಕೇಂದ್ರದ ಅಧಿಸೂಚನೆ ಅನುಮೋದಿಸುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ದೂರಶಿಕ್ಷಣದ 2019–20ನೇ ಸಾಲಿನ ಜುಲೈ–2019ರ ಪ್ರಥಮ ಆವೃತ್ತಿ ಹಾಗೂ ಜನವರಿ 2020ರ ದ್ವಿತೀಯ ಆವೃತ್ತಿಗೆ ಸಂಬಂಧಿಸಿದಂತೆ ಪ್ರವೇಶಾತಿ ಮಾಡಿಕೊಂಡಿದ್ದ ಒಟ್ಟು 47 ಕಲಿಕಾರ್ಥಿ ಸೇವಾ ಕೇಂದ್ರಗಳಲ್ಲಿ 46 ನ್ನು ವಿಶ್ವವಿದ್ಯಾಲಯದ ಅಧಿಕೃತ ಕಲಿಕಾರ್ಥಿ ಸೇವಾ ಕೇಂದ್ರಗಳೆಂದು ಅಧಿಸೂಚನೆ ಹೊರಡಿಸಲಾಗಿದೆ.

ಕಲಿಕಾರ್ಥಿ ಸೇವಾ ಕೇಂದ್ರಗಳ ಘೋಷಣೆ ಕುರಿತಂತೆ ರಚಿಸಿರುವ ಪರಿಶೀಲನಾ ತಂಡವು ಒಂದು ಕಲಿಕಾರ್ಥಿ ಸೇವಾ ಕೇಂದ್ರವನ್ನು ಶಿಫಾರಸ್ಸು ಮಾಡದೇ ಇರುವುದರಿಂದ ಅದನ್ನು ರದ್ದು ಪಡಿಸಲು ಹಾಗೂ ಉಳಿದಂತೆ 46 ಕಲಿಕಾರ್ಥಿ ಸೇವಾ ಕೇಂದ್ರಗಳನ್ನು ವಿಶ್ವವಿದ್ಯಾಲಯದ ಅಧಿಕೃತ ಕಲಿಕಾರ್ಥಿ ಸೇವಾ ಕೇಂದ್ರಗಳೆಂದು ಘೋಷಿಸುವ ಕುರಿತು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್. ಇವರು ಮಾತನಾಡಿ ಕಲಿಕಾರ್ಥಿ ಸೇವಾ ಕೇಂದ್ರಗಳ ವರದಿಗಳನ್ನು ಸಭೆಗೆ ಮಂಡಿಸಬೇಕು ಎಂದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಈ ಎಲ್ಲಾ ಕಲಿಕಾರ್ಥಿ ಕೇಂದ್ರಗಳ ಶುಲ್ಕ ವಸೂಲಾಗಿದೆಯೇ ಏಂದರು.

ಸದಸ್ಯರಾದ ಶ್ರೀ ರಮೇಶ್ ಬಾಬುರವರು ಮಾತನಾಡಿ ಈ ವಿಷಯ ಪೂಣವಾಗಿ ಚರ್ಚೆ ಮಾಡಬೇಕು, ಯಾವಾಗ ಕಲಿಕಾರ್ಥಿ ಸೇವಾ ಕೇಂದ್ರ ಎಂದು ನಿಗದಿಪಡಿಸಲಾಗಿತ್ತು ಎಂಬ ಮಾಹಿತಿ ಇಲ್ಲ. ಈಗ ಭೇಟಿ ನೀಡಿದ್ದರೆ ಮಾಹಿತಿ ಇರುತಿತ್ತು ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಈ ಹಿಂದೆಯೇ ಆಗಿದೆ. ಈಗ ವಿದ್ಯಾರ್ಥಿಗಳಿಗೆ ತೊಂದರೆ ಮಾಡುವುದು ಸರಿಯಲ್ಲ. ಆನ್ ಲೈನ್ ಪ್ರವೇಶಕ್ಕೆ ಈ ಕಲಿಕಾರ್ಥಿ ಕೇಂದ್ರಗಳ ಮೂಲಕ ಪ್ರವೇಶ ನೀಡಬಾರದು ಎಂಬುದು ನಮ್ಮ ಅಭಿಪ್ರಾಯ. ಆನ್ ಲೈನ್ ಪ್ರವೇಶಕ್ಕೆ ಸೆಂಟರ್ ಕೊಡಬೇಕು ಎಂದರೆ ಅದರ ಬಗ್ಗೆ ಕೆಲವು ನಿಯಮಗಳನ್ನು ಪಾಲಿಸಬೇಕು ಎಂದರು.

ಸದಸ್ಯರಾದ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಒಂದು ಪ್ರದೇಶದಲ್ಲಿ ಕಲಿಕಾರ್ಥಿ ಕೇಂದ್ರ ನಿಗದಿಪಡಿಸಬೇಕು ಎಂದರೆ ಒಂದು ಕೇಂದ್ರದಿಂದ ಇನ್ನೊಂದು ಕೇಂದ್ರಕ್ಕೆ ಇರುವ ಅಂತರ ನೋಡಿಕೊಂಡು ನಿಗದಿ ಮಾಡಬೇಕು. ಒಂದೇ ಪ್ರದೇಶದಲ್ಲಿ ಎರಡು ಮೂರು ಕಲಿಕಾರ್ಥಿ ಕೇಂದ್ರಗಳನ್ನು ನಿಗದಿಪಡಿಸಬಾರದು ಎಂದು ಹೇಳಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಆನ್–ಲೈನ್ ಪ್ರವೇಶವನ್ನು ಈ ಕಲಿಕಾರ್ಥಿ ಕೇಂದ್ರಗಳ ಮೂಲಕ ಮಾಡಿಕೊಳ್ಳಬಾರದು ಷರತ್ತನ್ನು ವಿಧಿಸಲಾಯಿತು ಹಾಗೂ ಕಲಿಕಾ ಕೇಂದ್ರಗಳಿಂದ ಎಷ್ಟು ಶುಲ್ಕ ಪಾವತಿಯಾಗಿದೆ ಇನ್ನು ಎಷ್ಟು ಬಾಕಿ ಇದೆ ಎಂಬ ಬಗ್ಗೆ ಶುಲ್ಕ ಪಾವತಿ ವಿವರದೊಂದಿಗೆ ಮುಂದಿನ ಸಭೆಗೆ ಮಂಡಿಸುವಂತೆ ತಿಳಿಸಿ ವಿಷಯವನ್ನು ಮುಂದೂಡಲಾಯಿತು.

## ಹಣಕಾಸು ವಿಭಾಗ

**2022–ಸಿಂ–1.26:** 2021–22ನೇ ಆರ್ಥಿಕ ವರ್ಷದ ಪ್ರಥಮ ಹಾಗೂ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆ ಕುರಿತು.

ನಿರ್ಣಯ: ಚರ್ಚೆಯ ನಂತರ 2021–22ನೇ ಆರ್ಥಿಕ ವರ್ಷದ ದಿ:11–10–2021 ಹಾಗೂ ದಿ:30–12–2021ರಂದು ನಡೆದ ಪ್ರಥಮ ಮತ್ತು ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

## ಅಭಿವೃದ್ಧಿ ವಿಭಾಗ

**2022–ಸಿಂ–1.27 :** ಕಾರು ಮೈಲೇಜ್ ದರವನ್ನು ನಿಗದಿ ಪಡಿಸುವ ಕುರಿತು.

ನಿರ್ಣಯ : ಚರ್ಚೆಯ ನಂತರ ಕಾರು ಮೈಲೇಜ್ ದರವನ್ನು ನಿಗದಿ ಪಡಿಸಲು ಸಭೆಯು ಅನುಮತಿಸಿತು.

## ಶೈಕ್ಷಣಿಕ ವಿಭಾಗ

**2022–ಸಿಂ–1.28 :** "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ." ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ಸ್ಥಾಪಿಸುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ನೌಕರರಾದ ಶ್ರೀ ಸೋಮಶೇಖರ ಪಿ.ಸಿ. ಪ್ರಥಮ ದರ್ಜೆ ಸಹಾಯಕರು ಇವರು **"ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್"** ಇವರ ಹೆಸರಿನಲ್ಲಿ ವಾಣಿಜ್ಯ ನಿಕಾಯದ ಸ್ನಾತಕೋತ್ತರ ವಾಣಿಜ್ಯ ಶಾಸ್ತ್ರ (ಎಂ.ಕಾಂ) ಅಧ್ಯಯನ ವಿಷಯದಲ್ಲಿ(ರೆಗ್ಯೂಲರ್) ಪ್ರಥಮ ರ್‍ಯಾಂಕ್ ಪಡೆಯುವ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಸ್ವರ್ಣಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ಸ್ಥಾಪಿಸಲು ಸಭೆಯು ಅನುಮತಿಸಿತು. ಕುಲಸಚಿವರು ಮಾತನಾಡಿ ಶ್ರೀ ಸೋಮಶೇಖರ್ ಇವರು ವಿಶ್ವವಿದ್ಯಾಲಯದಲ್ಲಿ ನಾಲ್ಕು ಸ್ವರ್ಣಪದಕಗಳನ್ನು ಸ್ಥಾಪಿಸಿರುತ್ತಾರೆ ಇವರನ್ನು ಅಭಿನಂದಿಸಬೇಕು ಎಂದರು. ಇದಕ್ಕೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು.

**2022–ಸಿಂ–1.29 :** "ಲೇಟ್ ಎಸ್.ಡಿ. ಪುಷ್ಪ, ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ." ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ಸ್ಥಾಪಿಸುವ ಕುರಿತು.

ನಿರ್ಣಯ : ಶ್ರೀ ಕೆ.ಟಿ. ಗೋವಿಂದಪ್ಪ, ಹಿರಿಯ ಸಹಾಯಕರು ಸಹ್ಯಾದ್ರಿ ವಿಜ್ಞಾನ ಕಾಲೇಜು ಶಿವಮೊಗ್ಗ – ಇವರು " **" ಲೇಟ್ ಎಸ್. ಡಿ. ಪುಷ್ಪ, ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ ""** ಇವರ ಹೆಸರಿನಲ್ಲಿ ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಸ್ನಾತಕ ಪದವಿಯ ಬಿ.ಎಸ್ಸಿ. ಎಲೆಕ್ಟ್ರಾನಿಕ್ಸ್(ಐಚ್ಛಿಕ) ಅಧ್ಯಯನ ವಿಷಯದಲ್ಲಿ (ರೆಗ್ಯುಲರ್) ಮೊದಲ ಪ್ರಯತ್ನದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಸ್ವರ್ಣ ಪದಕ ನೀಡುವ ಸಲುವಾಗಿ ದತ್ತಿ ನಿಧಿ ಸ್ವರ್ಣಪದಕ ಸ್ಥಾಪಿಸಲು ಸಭೆಯು ಅನುಮತಿಸಿತು.

**2022–ಸಿಂ–1.30 :** ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ – ಈ ಕಾಲೇಜಿನ "ವಾಣಿಜ್ಯ ಮತ್ತು ನಿರ್ವಹಣಾ" ವಿಭಾಗಗಳ ಸಂಶೋಧನಾ ಕೇಂದ್ರದ ಮಾನ್ಯತೆ ಕುರಿತು.

ನಿರ್ಣಯ : ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ – ಈ ಕಾಲೇಜಿನ "ವಾಣಿಜ್ಯ ಮತ್ತು ನಿರ್ವಹಣಾ" ವಿಭಾಗಗಳ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಭೆಯು ಅನುಮತಿಸಿತು.

**2022–ಸಿಂ–1.31:** ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ – ಈ ಸಂಸ್ಥೆಯ "ಔದ್ಯೋಗಿಕ ರಸಾಯನಶಾಸ್ತ್ರ" ವಿಭಾಗದ "ಸಂಶೋಧನಾ ಕೇಂದ್ರ"ದ ಮಾನ್ಯತೆ ಕುರಿತು.

ನಿರ್ಣಯ: ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ – ಈ ಸಂಸ್ಥೆಯ "ಔದ್ಯೋಗಿಕ ರಸಾಯನಶಾಸ್ತ್ರ" ವಿಭಾಗದ "ಸಂಶೋಧನಾ ಕೇಂದ್ರ"ದ ಮಾನ್ಯತೆ ನವೀಕರಿಸಲು ಸಭೆಯು ಅನುಮೋದನೆ ನೀಡಿತು.

2022–ಸಿಂ–1.32: ಸ್ನಾತಕೋತ್ತರ ಸಮಾಜಕಾರ್ಯ ವಿಭಾಗಕ್ಕೆ ದಾಖಲಾಗುವ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ತುಮಕೂರು ವಿಶ್ವವಿದ್ಯಾಲಯದ ಶುಲ್ಕಪಟ್ಟಿಯನ್ವಯ ಪರಿಷ್ಕರಿಸುವ ಕುರಿತು.

ಚರ್ಚೆ : ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಸ್ನಾತಕೋತ್ತರ ಸಮಾಜ ಕಾರ್ಯ ವಿಭಾಗದ ಅಧ್ಯಕ್ಷರು ಪತ್ರ ಬರೆದು ಸ್ನಾತಕೋತ್ತರ ಸಮಾಜ ಕಾರ್ಯ ವಿಭಾಗದ ಪ್ರವೇಶ ಶುಲ್ಕ ರೂ. 18800–00 ಇದ್ದು ಬೇರೆ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ಹೆಚ್ಚೆನಿಸುತ್ತದೆ. ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯುವವರಲ್ಲಿ ಗ್ರಾಮೀಣ ವಿಭಾಗದವರೇ ಹೆಚ್ಚಾಗಿದ್ದು ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೆ. ಅಲ್ಲದೇ ಈ ವಿಭಾಗಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯೂ ಗಣನೀಯವಾಗಿ ಕಡಿಮೆಯಾಗುತ್ತಿರುವುದರಿಂದ ಪ್ರವೇಶ ಶುಲ್ಕವನ್ನು ಪರಿಷ್ಕರಿಸುವಂತೆ ಕೋರಿ ಪತ್ರ ಬರೆದಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್ ರವರು ಮಾತನಾಡಿ ಇದು ವಿಶ್ವವಿದ್ಯಾಲಯವು ಪ್ರಾರಂಭಿಸಿರುವ ಸೆಲ್ಫ್ ಫೈನಾನ್ಸ್ ಕೋರ್ಸ್ ಆಗಿರುವುದರಿಂದ ಬೇರೆ ಕೋರ್ಸ್‌ಗಳಿಗಿಂತ ಶುಲ್ಕ ಜಾಸ್ತಿ ಇರುತ್ತದೆ. ಹಿಂದಿನ ಕುಲಸಚಿವರ ಅವಧಿಯಲ್ಲಿ ಈ ಅಸಮಾನತೆಯನ್ನು ಹೋಗಲಾಡಿಸಲು ಸಮಿತಿಯನ್ನು ರಚಿಸಿತ್ತು ಅದು ವರದಿಯನ್ನು ನೀಡಿದೆ. ಈ ವರದಿಯಲ್ಲಿ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಶುಲ್ಕವನ್ನು ಪರಿಷ್ಕರಿಸಲಾಗಿದೆ ಅದು ಜಾರಿಯಾದರೆ ಅನುಕೂಲವಾಗಬಹುದು ಎಂದರು.

ಸದಸ್ಯರಾದ ಶ್ರೀ ರಮೇಶ್ ಬಾಬುರವರು ಮಾತನಾಡಿ ಪ್ರವೇಶ ಕಡಿಮೆಯಾಗಲು ಕಾರಣವೇನು, ಶುಲ್ಕ ಜಾಸ್ತಿ ಇರುವುದರಿಂದಲೋ ಅಥವಾ ಶಿಕ್ಷಣದ ಗುಣಮಟ್ಟ ಕಡಿಮೆಯಾಗಿರುವುದರಿಂದಲೋ ಎಂದು ಕೇಳಿದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್. ಇವರು ಮಾತನಾಡಿ ಸದರಿ ಕೋರ್ಸ್ ಅಧ್ಯಯನ ಮಾಡುವುದರಿಂದ ಯಾವುದೇ ಕೆಲಸ ಸಿಗುವುದಿಲ್ಲ ಎಂದಾದರೆ ಅಂತಹ ಕೋರ್ಸ್‌ಗೆ ಪ್ರವೇಶ ಕಡಿಮೆ ಆಗಿಯೇ ಆಗುತ್ತದೆ ಎಂದರು.

ನಿರ್ಣಯ : ಸುಧೀರ್ಘ ಚರ್ಚೆಯ ನಂತರ ಪ್ರೊ. ರಿಯಾಜ್ ಮಹಮೂದ್, ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ಇವರ ಅಧ್ಯಕ್ಷತೆಯ ಸಮಿತಿಯು ಈ ಹಿಂದೆಯೇ ಸಿದ್ದಪಡಿಸಿ ಕೊಟ್ಟಿರುವ ಶುಲ್ಕ ಪರಿಷ್ಕರಣಾ ಪಟ್ಟಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

## ಕಾಲೇಜು ಅಭಿವೃದ್ಧಿ ವಿಭಾಗ

2022–ಸಿಂ–1.33 : ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳ 2021–22ನೇ ಸಾಲಿನ ಸ್ಥಳೀಯ ತಪಾಸಣಾ ಸಮಿತಿಗಳ ವರದಿಗಳನ್ನು ಘಟನೋತ್ತರ ಅನುಮೋದನೆ ಮಂಡಿಸುವ ಬಗ್ಗೆ.

ಚರ್ಚೆ : ಕುಲಸಚಿವರು ಮಾತನಾಡಿ ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳ 2021–22ನೇ ಸಾಲಿನ ಸ್ಥಳೀಯ ತಪಾಸಣಾ ಸಮಿತಿಗಳ ವರದಿಗಳನ್ನು ಘಟನೋತ್ತರ ಅನುಮೋದನೆಗೆ ಮಂಡಿಸಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಸ್ಥಳೀಯ ತಪಾಸಣಾ ಸಮಿತಿಗೆ ಒಬ್ಬರು ಸಿಂಡಿಕೇಟ್ ಸದಸ್ಯರನ್ನು ಏಕೆ ನೇಮಿಸಬಾರದು ಎಂದರು. ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆ ಹಾಗೂ ಶ್ರೀ ರಾಮಲಿಂಗಪ್ಪರವರು ಇದಕ್ಕೆ ಧ್ವನಿಗೂಡಿಸಿದರು. ಇದಕ್ಕೆ ಮಾನ್ಯಕುಲಪತಿಗಳು ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ತಪಾಸಣಾ ಸಮಿತಿಗೆ ನೇಮಿಸಬೇಕು ಎಂಬ ಆದೇಶವನ್ನು ಸರ್ಕಾರ ಹಿಂಪಡೆದಿದೆ ಎಂದರು. ಸದಸ್ಯರು ಪತ್ರ ತೋರಿಸಿ ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಸರ್ಕಾರವು ಆದೇಶವನ್ನು ಹಿಂಪಡೆದಿರುವುದು ನಿಜ ಎಂದರು. ನಾವು ಒಂದು ಮನವಿ ಕೊಡೋಣ ಎಂದರು.

ಸದಸ್ಯರಾದ ಡಾ. ಬಿ.ಜಿ, ಧನಂಜಯ ಮತ್ತು ಶ್ರೀಮತಿ ಭಾರತಿಯವರು ಮಾತನಾಡಿ ಆನ್-ಲೈನ್ ತಪಾಸಣಾ ಸಮಿತಿಗಳಿಂದ ಸರ್ಕಾರಿ ಕಾಲೇಜುಗಳಿಗೆ ಬಹಳ ಅನ್ಯಾಯವಾಗುತ್ತಿದೆ. ಅರ್ಧ ಅಂಕಗಳಿಂದ ಶಾಶ್ವತ ಸಂಯೋಜನೆಯಿಂದ ವಂಚಿತರಾಗ್ತಾ ಇದ್ದೇವೆ ಎಂದು ಹೇಳಿದರು.

ಪ್ರೊ. ರಿಯಾಜ್ ಮಹಮೂದ್ ರವರು ಮಾತನಾಡಿ ಈ ವಿಷಯದಲ್ಲಿ ಆನ್-ಲೈನ್ ತಪಾಸಣಾ ಸಮಿತಿಯ ಸದಸ್ಯರುಗಳು ವರದಿಯಲ್ಲಿ ಹೌದು/ಇಲ್ಲ ಎಂದಷ್ಟೇ ನಮೂದಿಸಬೇಕು ಬೇರೆ ಏನೂ ನಮೂದಿಸುವಂತಿಲ್ಲ. ನಮೂದಿಸಿದ ನಂತರ ಅದರ ಮುದ್ರಿತ ಪ್ರತಿಗೆ ಪ್ರಾಂಶುಪಾಲರ ಸಹಿ ಪಡೆಯಲಾಗುತ್ತದೆ. ಎಷ್ಟು ಅಂಕಗಳು ಬಂದಿರುತ್ತವೆ ಎಂದು ತಪಾಸಣಾ ಸಮಿತಿಯ ಸದಸ್ಯರುಗಳಿಗೆ ಗೊತ್ತಾಗುವುದಿಲ್ಲ. ಆನ್-ಲೈನ್ ಸಂಯೋಜನೆಯ ಕೀ ಮಾನ್ಯ ಕುಲಪತಿಗಳ ಹತ್ತಿರ ಇರುತ್ತದೆ. ಅವರು ಅಂಗೀಕರಿಸಿದ ಮೇಲೆ ಕಾಲೇಜಿನವರಿಗೆ ತಿಳಿಯುತ್ತದೆ. ಆದ್ದರಿಂದ ಇದರಲ್ಲಿ ತಪಾಸಣಾ ಸಮಿತಿಯ ಸದಸ್ಯರುಗಳ ಹಸ್ತ ಕ್ಷೇಪ ಇರುವುದಿಲ್ಲ ಎಂದರು.

ನಿರ್ಣಯ : ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳ 2021-22ನೇ ಸಾಲಿನ ಸ್ಥಳೀಯ ತಪಾಸಣಾ ಸಮಿತಿಗಳ ವರದಿಗಳನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿತು.

2022-ಸಿಂ-1.34 : ಕಾಲೇಜಿನ ಹೆಸರನ್ನು ತಿದ್ದುಪಡಿ ಮಾಡುವ ಕುರಿತು.

ನಿರ್ಣಯ : ಚರ್ಚೆಯ ನಂತರ Government Women's First Grade College Chikkamgaluru ಕಾಲೇಜಿನ ಹೆಸರನ್ನು "Government First Grade College for Women Chikkamagaluru" ಎಂದು ತಿದ್ದುಪಡಿ ಮಾಡಲು ಸಭೆಯು ಅನುಮತಿ ನೀಡಿತು.

### ಯು.ಸಿ.ಸಿ.ಎಫ್ ವಿಭಾಗ

2022-ಸಿಂ-1.35 : ವಿಶ್ವವಿದ್ಯಾಲಯದಲ್ಲಿ ಸರ್ಕಾರದ ಇ-ಆಫೀಸ್ ತಂತ್ರಾಂಶವನ್ನು ಅಳವಡಿಸಿಕೊಂಡು ಜಾರಿಗೊಳಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ.

ನಿರ್ಣಯ : ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

### ಎಸ್ಟೇಟ್ ವಿಭಾಗ

2022-ಸಿಂ-1.36: ವಿಶ್ವವಿದ್ಯಾಲಯದ ಆವರಣದ "ಎರೆಹುಳು ಗೊಬ್ಬರ ತಯಾರಿಕಾ ಘಟಕ" ನಿರ್ವಹಣೆ ಕುರಿತು.

ಚರ್ಚೆ: ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದ ಆವರಣದಲ್ಲಿ ಸಾಕಷ್ಟು ಒಣಗಿದ ತರಗೆಲೆಗಳು, ಸೊಪ್ಪು ವ್ಯರ್ಥ ಆಗುತ್ತಿದ್ದು ಸರಿಯಾಗಿ ನಿರ್ವಹಿಸಿದಲ್ಲಿ ಅದರಿಂದ ಉತ್ತಮವಾದ ಗೊಬ್ಬರ ತಯಾರಿಸಿ ತೋಟಗಾರಿಕಾ ವಿಭಾಗದವರು ಬಳಸಿದರೆ ವಿಶ್ವವಿದ್ಯಾಲಯವು ಹಸಿರಿನಿಂದ ಕಂಗೊಳಿಸುವಂತೆ ಮಾಡಬಹುದು. ಆದರೆ ಪ್ರಸ್ತುತ ತೋಟಗಾರಿಕಾ ಸಿಬ್ಬಂದಿ ಮತ್ತು ಎಸ್ಟೇಟ್ ವಿಭಾಗದ ಸಿಬ್ಬಂದಿಗಳು

ಸ್ವಚ್ಛತೆ ಮಾತ್ರ ಮಾಡುತ್ತಿದ್ದು ಗಿಡಬೆಳೆಸುವ ತಮ್ಮ ಮೂಲ ಕರ್ತವ್ಯವನ್ನೇ ಮರೆತಿದ್ದಾರೆ ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್ ರವರು ಮಾತನಾಡಿ ಕಳೆದ ಹತ್ತು ವರ್ಷಗಳಿಂದ ಎರೆಹುಳು ಗೊಬ್ಬರ ತಯಾರಿಕಾ ಘಟಕ ಇದೆ ಆದರೆ ಕಾರಣಾಂತರದಿಂದ ಈಗ ನಿಂತು ಹೋಗಿರುತ್ತದೆ. ಈ ಘಟಕವನ್ನು ಸ್ನಾತಕೋತ್ತರ ಪರಿಸರ ವಿಜ್ಞಾನ ವಿಭಾಗದ ಪ್ರೊ. ಜೆ. ನಾರಾಯಣ ಸರ್ ರವರು ನಿರ್ವಹಣೆ ಮಾಡುತ್ತಿದ್ದರು ಅದರ ವಿಲೇವಾರಿ ಎಸ್ಟೇಟ್ ವಿಭಾಗದವರು ಮಾಡಬೇಕಾಗುತ್ತದೆ. ಎರಡು ವಿಭಾಗಗಳ ಸಮನ್ವಯದಿಂದ ನಡೆಯಬೇಕಾಗಿರುತ್ತದೆ ಈ ಹಂತದಲ್ಲಿ ನಿಂತಿದೆ. ಅಲ್ಲದೇ ವಿಶ್ವವಿದ್ಯಾಲಯದಲ್ಲಿ Banana Plant Tissue culture project ವತಿಯಿಂದ ಸಮಾಜದ ಹಿಂದುಳಿದ ವರ್ಗದ ರೈತರಿಗೆ ಕಡಿಮೆ ದರದಲ್ಲಿ ಬಾಳೆ ಗಿಡ ಕೊಡಲಾಗುತ್ತಿತ್ತು. ಇದಕ್ಕೆ ನ್ಯಾಕ್ ತುಂಬಾ ಪ್ರಶಂಸೆ ಮಾಡಿತ್ತು ಎಂದರು. ಅಲ್ಲದೆ ಇದರಿಂದ ವಿಶ್ವವಿದ್ಯಾಲಯಕ್ಕೆ ವಾರ್ಷಿಕ 46 ಲಕ್ಷ ಆದಾಯ ಬರುತಿತ್ತು. ಆದರೆ ಕಳೆದ 4 ವರ್ಷಗಳಿಂದ ಅದನ್ನು ನಿಲ್ಲಿಸಲಾಗಿದೆ ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ ಆವರಣದ "ಎರೆಹುಳು ಗೊಬ್ಬರ ತಯಾರಿಕಾ ಘಟಕ" ನಿರ್ವಹಣೆಗೆ ವಿಶ್ವವಿದ್ಯಾಲಯದ ತೋಟಗಾರಿಕಾ ಸಹಾಯಕರನ್ನು ನೇಮಿಸಿ ಪ್ರೊ. ನಾರಾಯಣ್ ಜೆ., ಪ್ರಾಧ್ಯಾಪಕರು, ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಇವರ ನೇತೃತ್ವದಲ್ಲಿ ಪುನ: ನವೀಕರಿಸಲು ನಿರ್ಣಯಿಸಲಾಯಿತು.

2022–ಸಿಂ–1.37 : ವಿಜ್ಞಾನ ಕೇಂದ್ರ ಕೆಟಗರಿ–2 ಸ್ಥಾಪನೆಗೆ ಸಹ್ಯಾದ್ರಿ ಕಾಲೇಜ್ ಆವರಣದ ಜಮೀನನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ವಿದ್ಯುನ್ಮಾನ,ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ–ಬೆಂಗಳೂರು ಇವರಿಗೆ ಹಸ್ತಾಂತರಿಸುವ ಬಗ್ಗೆ.

ನಿರ್ಣಯ : ದಿನಾಂಕ:28–02–2022ರಂದು ನಡೆದ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ.

## ದಾಸ್ತಾನು ಖರೀದಿ ವಿಭಾಗ

2022–ಸಿಂ–1.38 : ವಿಶ್ವವಿದ್ಯಾಲಯದ ಪ್ರಸಾರಂಗ ವಿಭಾಗದ ಪಠ್ಯಪುಸ್ತಕ / ಪತ್ರಿಕೆ / ಜರ್ನಲ್ಸ್‌ಗಳ ಮುದ್ರಣ ಮತ್ತು ಸರಬರಾಜು ಮಾಡುವ ಸಂಬಂಧದ ಇ–ಟೆಂಡರ್ ಅಂಗೀಕರಿಸುವ ಕುರಿತು.

ಚರ್ಚೆ : ಕುಲಸಚಿವರು ವಿಷಯ ಮಂಡಿಸಿದರು. ಸದಸ್ಯರಾದ ಶ್ರೀ ನಟೇಶ್‌ರವರು ಮಾತನಾಡಿ ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಪ್ರತಿ ವರ್ಷ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲಾ ಪದವಿ ಕಾಲೇಜುಗಳಲ್ಲಿ 'ಅರಿವು' ಕಾರ್ಯಕ್ರಮ ಮಾಡಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಪ್ರಸಾರಾಂಗದ ವತಿಯಿಂದ ಕುವೆಂಪುರವರ "ವಿಚಾರ ಕ್ರಾಂತಿಗೆ ಆಹ್ವಾನ" ಎಂಬ ಪುಸ್ತಕವನ್ನು ಘಟಿಕೋತ್ಸವದಲ್ಲಿ ಎಲ್ಲರಿಗೂ ಕೊಡಬೇಕು ಹಾಗೂ "ಕೆಳದಿ ರಾಣಿ ಚೆನ್ನಮ್ಮ" ಇವರಿಗೆ ಸಂಬಂಧಿಸಿದ ಸಣ್ಣ ಸಣ್ಣ ಪುಸ್ತಕಗಳನ್ನು ಮುದ್ರಿಸಿ ಎಲ್ಲರಿಗೂ ಹಂಚಬೇಕು ಎಂದು ಹೇಳಿದರು. ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿದರು.

ನಿರ್ಣಯ : ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ಪಠ್ಯಪುಸ್ತಕ / ಪತ್ರಿಕೆ / ಜರ್ನಲ್ಸ್‌ಗಳ ಮುದ್ರಣ ಮತ್ತು ಸರಬರಾಜು ಮಾಡುವ ಸಂಬಂಧದ ಇ–ಟೆಂಡರ್‌ನ್ನು ಸಭೆಯು ಅಂಗೀಕರಿಸಿತು.

**2022–ಸಿಂ–1.39 :** ದಿನಾಂಕ:08–02–2022 ರಂದು ನಡೆದ ಖರೀದಿ ಸಮಿತಿ ಸಭೆ ನಡಾವಳಿ ಅನುಮೋದನೆ ಬಗ್ಗೆ.

ನಿರ್ಣಯ : ದಿನಾಂಕ:08–02–2022 ರಂದು ನಡೆದ ಖರೀದಿ ಸಮಿತಿ ಸಭೆ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

## ಇಂಜಿನಿಯರಿಂಗ್ ವಿಭಾಗ

**2022–ಸಿಂ–1.40 :** ದಿನಾಂಕ:09–02–2022ರಂದು ನಡೆದ ಕಟ್ಟಡ ಸಮಿತಿ ಸಭೆಯ ನಡಾವಳಿಯ ಅನುಮೋದನೆ ಕುರಿತು.

ಚರ್ಚೆ : ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ವಿಶ್ವವಿದ್ಯಾಲಯದ ಕಟ್ಟಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯಿಂದ ಕ್ಲಿಯರೆನ್ಸ್ ಬಂದ ನಂತರ ಪಾವತಿ ಮಾಡಬಹುದು ಎಂದು ಕಟ್ಟಡ ಸಮಿತಿ ಸಭೆಯ ನಡಾವಳಿಯಲ್ಲಿ ತಿದ್ದುಪಡಿ ಮಾಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಕೆಳದಿ ವಸ್ತುಸಂಗ್ರಹಾಲಯ ಕಟ್ಟಡವು ದುರಸ್ಥಿಯಾಗಬೇಕಾಗಿದೆ ಹಾಗೂ ಸುಣ್ಣ ಬಣ್ಣ ಮಾಡಬೇಕು. ಸದರಿ ಕಟ್ಟಡವನ್ನು ವಿಶ್ವವಿದ್ಯಾಲಯದ ಇಂಜಿನಿಯರ್ ಪರಿಶೀಲಿಸಿ ಬೇಕಾಗುವ ಅಂದಾಜು ವೆಚ್ಚದ ಪಟ್ಟಿಯನ್ನು ಸಿದ್ಧಪಡಿಸಿ ಸಭೆಗೆ ಮಂಡಿಸುವಂತೆ ಕೋರಿದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ ತಾಳೆಗರಿಗಳನ್ನು ಸುರಕ್ಷಿತವಾಗಿ ಸಂಗ್ರಹ ಮಾಡಬೇಕಾಗಿದೆ. ಮೈಸೂರಿನ ಜೆ.ಎಸ್.ಎಸ್. ಕಾಲೇಜಿನಲ್ಲಿ ಒಬ್ಬರು ತಾಳೆಗರಿಗಳನ್ನು ಬಹಳ ಸುರಕ್ಷಿತವಾಗಿ ಸಂಗ್ರಹ ಮಾಡುವ ವಿಧಾನದಲ್ಲಿ ಪರಿಣಿತಿ ಹೊಂದಿದವರಿದ್ದಾರೆ ಅವರನ್ನು ಕರೆಸಿ ಅವರ ಸೇವೆಯನ್ನು ಬಳಸಿಕೊಳ್ಳಬಹುದು ಎಂದು ಹೇಳಿದರು

ನಿರ್ಣಯ : ದಿನಾಂಕ:09–02–2022ರಂದು ನಡೆದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.

**2022–ಸಿಂ–ವಿ–1.02:** <u>ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:</u>

1) **ದೂರ ಶಿಕ್ಷಣದ 2019–20ನೇ ಸಾಲಿನ ವಿದ್ಯಾರ್ಥಿಗಳಿಗೆ ಪರೀಕ್ಷೆ ಇಲ್ಲದೇ ಪ್ರಮೋಟ್ ಮಾಡಿರುವ ಕುರಿತು.**

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ದೂರ ಶಿಕ್ಷಣದ 2019–20ನೇ ಸಾಲಿನ ವಿದ್ಯಾರ್ಥಿಗಳಿಗೆ ಪರೀಕ್ಷೆ ಇಲ್ಲದೇ ಪ್ರಮೋಟ್ ಮಾಡುವ ಕುರಿತಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಪ್ರಕರಣ 15 ಉಪಕಂಡಿಕೆ (5)ರ ಪ್ರಕಾರ ತೆಗೆದುಕೊಂಡಿರುವ ನಿರ್ಣಯವನ್ನು ನಿಯಮಾನುಸಾರ ಸಭೆಗೆ ಮಂಡಿಸಿ ಎಂದರು ತಾವು ತೆಗೆದುಕೊಂಡಿರುವ ನಿರ್ಣಯ ಕಾನೂನಾತ್ಮಕವಾಗಿಲ್ಲದೇ ಇರುವುದರಿಂದ ವಿದ್ಯಾರ್ಥಿಗಳು ಬೀದಿಗೆ ಬರುತ್ತಾರೆ. ದಿ:07–02–2022ರಂದು 4.30ಕ್ಕೆ ನಿರ್ಣಯ ತೆಗೆದುಕೊಂಡು 5.30ಕ್ಕೆ ಫಲಿತಾಂಶ ಪ್ರಕಟಿಸಿ ಅಂಕಪಟ್ಟಿ ನೀಡಿರುತ್ತಾರೆ. ಮುಂದೆ ಇದನ್ನು ಯುಜಿಸಿ ಮಾನ್ಯ ಮಾಡಿಲ್ಲವಾದರೆ ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನವಾಗುತ್ತದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ಬಗ್ಗೆ ಈ ಹಿಂದಿನ ಸಭೆಗಳಲ್ಲಿ ಹೇಳಿದ್ದೇನೆ ಸುಮಾರು 6 ತಿಂಗಳಿಂದ ನಿರ್ಣಯ ಮಾಡಲು ಆಗಿರುವುದಿಲ್ಲ. ನಾನು ಘನತೆವೆತ್ತ ರಾಜ್ಯಪಾಲರ ಹತ್ತಿರ ಸಮಯ ಕೇಳಿದ್ದೇನೆ ಅವರ ಹತ್ತಿರ ಮಾತನಾಡುತ್ತೇನೆ ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ನೀವು ಏನಾದರೂ ಮಾಡಿ ಆದರೆ ಪ್ರಕರಣ 15 ಉಪಕಂಡಿಕೆ (5)ರ ಪ್ರಕಾರ ತೆಗೆದುಕೊಂಡಿರುವ ನಿರ್ಣಯದ ಮುಂದಿನ ಹಂತ ಮಾಡಲೇಬೇಕು. ಸಭೆಗೆ

ಇಟ್ಟಿಲ್ಲ ಎಂದರೆ ಸಿಂಡಿಕೇಟ್ ಬೇರೆ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ ಎಂದರು. ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಇದಕ್ಕೆ ಧ್ವನಿಗೂಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಇದು ಒಂದು Hasty decision, ನಾನು ರಾಜ್ಯಪಾಲರಿಗೆ ಸಮಜಾಯಿಷಿ ನೀಡುತ್ತೇನೆ ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ರವರು ಮಾತನಾಡಿ ರೆಗ್ಯುಲರ್ ಸ್ನಾತಕೋತ್ತರ ವಿದ್ಯಾರ್ಥಿಗಳು ದೂರಶಿಕ್ಷಣದ ವಿದ್ಯಾರ್ಥಿಗಳಿಗೆ ಪರೀಕ್ಷೆ ಮಾಡಿ ಎಂದು ಒತ್ತಾಯಿಸಿದ್ದಾರೆ, ದೂರಶಿಕ್ಷಣದ ವಿದ್ಯಾರ್ಥಿಗಳೂ ತಮಗೆ ಪರೀಕ್ಷೆ ಮಾಡಿ ಎಂದು ಮನವಿ ಮಾಡಿದ್ದಾರೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ದಿ:30.11.2021ರಂದು ನಿರ್ಣಯ ಆಗಿತ್ತು. ಮುಷ್ಕರ ಆದಾಗ ನೀವೊಬ್ಬರೇ ನಿರ್ಣಯ ತೆಗೆದುಕೊಳ್ಳುವುದರ ಬದಲಿಗೆ ನಮಗೂ ಕರೆಯಬೇಕಾಗಿತ್ತು ನಾವೂ ಜವಾಬ್ದಾರಿ ತೆಗೆದುಕೊಳ್ಳುತಿದ್ದೆವು ಎಂದರು.

ಸದಸ್ಯರಾದ ಶ್ರೀ ರಮೇಶ್‌ಬಾಬುರವರು ಮಾತನಾಡಿ ವಿಷಯ ಕೋರ್ಟನಲ್ಲಿರಬೇಕಾದರೆ ತಾವು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸದೆ ಹೇಗೆ ನಿರ್ಣಯ ತೆಗೆದುಕೊಂಡಿರಿ ಎಂದು ಕೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ರವರು ಮಾತನಾಡಿ ಕುಲಪತಿಗಳ ಮೇಲೆ ಆಪಾದನೆ ಇರುವುದರಿಂದ, ಆಡಳಿತ ವಿಭಾಗದ ಮುಖ್ಯಸ್ಥರಾಗಿರುವುದರಿಂದ ಕುಲಸಚಿವರೇ ಇದರ ನಿರ್ಣಯ ತೆಗೆದುಕೊಳ್ಳಬೇಕು ಎಂದರು ಹಾಗೂ ದೂರ ಶಿಕ್ಷಣ ವಿದ್ಯಾರ್ಥಿಗಳಿಗೆ ಪ್ರಮೋಟ್ ಮಾಡಿರುವುದನ್ನು ಹಿಂಪಡೆದು ಕೂಡಲೇ ಪರೀಕ್ಷೆ ನಡೆಸಲು ಸಮರೋಪಾದಿಯಲ್ಲಿ ಕ್ರಮ ಕೈಗೊಂಡು ವೇಳಾಪಟ್ಟಿಯನ್ನು ಸಿದ್ದಪಡಿಸಿ 2019-20ರಲ್ಲಿ ಪ್ರಥಮ ಆವೃತ್ತಿ ಮತ್ತು ದ್ವಿತೀಯ ಆವೃತ್ತಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ತಕ್ಷಣ ಪರೀಕ್ಷೆ ಮಾಡಬೇಕು ಎಂದು ಕುಲಸಚಿವರನ್ನು ಒತ್ತಾಯಿಸಿದರು. ಹಾಗೂ ನಿಯಮಾನುಸಾರವಲ್ಲದ ಈ ನಿರ್ಣಯ ಮುಂದಿನ ದಿನಗಳಲ್ಲಿ ಘನ ನ್ಯಾಯಾಲಯ ಅಥವಾ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ – ಯುಜಿಸಿ ವ್ಯತಿರಿಕ್ತ ತೀರ್ಮಾನ ತೆಗೆದುಕೊಂಡಿದ್ದೇ ಆದಲ್ಲಿ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಡುತ್ತಾ, ಸಾರ್ವಜನಿಕ ವಲಯದಲ್ಲಿ, ಪರೀಕ್ಷೆ ಇಲ್ಲದೇ ಉತ್ತೀರ್ಣಗೊಳಿಸಿರುವ ಕ್ರಮದ ಹಿಂದೆ ಭ್ರಷ್ಟಾಚಾರ ನಡೆದಿದೆ ಎನ್ನುವ ಚರ್ಚೆ ನಡೆಯುತಿದ್ದು, ಕೆಲವು ಪೂರಕ ದಾಖಲೆಗಳು ಅದನ್ನು ಸರಿಯೆಂದು ಮೇಲ್ನೋಟಕ್ಕೆ ನಂಬಬಹುದಾದ ಪೂರಕ ದಾಖಲೆಗಳಾಗಿರುವುದರಿಂದ, ಮುಂದೆ ವಿದ್ಯಾರ್ಥಿಗಳಿಗೆ ಆಗಬಹುದಾದ ತೊಂದರೆ ತಪ್ಪಿಸಲು ಇರುವ ಏಕೈಕ ಮಾರ್ಗ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸುವುದು ಮಾತ್ರವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಹಾಗೆಯೇ ಈಗ ಫಲಿತಾಂಶ ಪ್ರಕಟಿಸಿರುವ ಕ್ರಮವು ನಿಯಮಬಾಹಿರವಾಗಿದ್ದು ದಿನಾಂಕ:30-11-2021ರ ಸರ್ವಾನುಮತದ ಸಿಂಡಿಕೇಟ್ ನಿರ್ಣಯಕ್ಕೆ ವ್ಯತಿರಿಕ್ತವಾದ ಕ್ರಮವಾಗಿರುತ್ತದೆ ಎಂದು ಎಲ್ಲಾ ಸದಸ್ಯರು ತಿಳಿಸಿದರು.

ಯುಜಿಸಿ ನಿಯಮಗಳ ಪ್ರಕಾರ ಪರೀಕ್ಷೆ ಇಲ್ಲದೇ ಪಾಸ್ ಮಾಡುವ ಸಲಹೆ ಅಥವಾ ಯಾವುದಾದರೂ ಇನ್ನೋವೇಟಿವ್ ಯೋಚನೆಗಳ ಮೂಲಕ ನಿರಂತರ ಕಲಿಕಾ ವ್ಯವಸ್ಥೆಗಳಲ್ಲಿನ ಆಧಾರದ ಮೇಲೆ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಿ, ಕೋವಿಡ್ ಸಂದರ್ಭದಲ್ಲಿ, ಅಂದರೆ 2020-21ರಲ್ಲಿ ನಿರಂತರ ಕಲಿಕೆಯ ಮೌಲ್ಯಮಾಪನದ ಆಧಾರದ ಮೇಲೆ ಉತ್ತೀರ್ಣಗೊಳಿಸಲು ಅವಕಾಶವಿತ್ತು. ಆದರೆ ಯಾವುದೇ ನಿರಂತರ ಕಲಿಕಾ ಮೌಲ್ಯಮಾಪನವನ್ನು ನಡೆಸದೆ, ಕೋವಿಡ್ ತೀವ್ರತೆ ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಇರುವಂತಹ ಈ ಸಂದರ್ಭದಲ್ಲಿ ಪರೀಕ್ಷೆ ನಡೆಸದೆ ಫಲಿತಾಂಶ ಪ್ರಕಟಿಸುವುದು ಶಿಕ್ಷಣದ ಪಾವಿತ್ರತೆ ಹಾಳು ಮಾಡಿದಂತಾಗುತ್ತದೆ. ವಿಶ್ವವಿದ್ಯಾಲಯದ ಗೌರವ ಘನತೆಗೆ ಕುಂದುಂಟಾಗುತ್ತದೆ ಹಾಗೂ ಭವಿಷ್ಯದಲ್ಲಿ ಘನ ನ್ಯಾಯಾಲಯ, ಯುಜಿಸಿ ಪರೀಕ್ಷೆ ಇಲ್ಲದೇ ಫಲಿತಾಂಶ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದಾದರೂ ವ್ಯತಿರಿಕ್ತ ತೀರ್ಮಾನಗಳು ತೆಗೆದುಕೊಂಡಿದ್ದೆ ಆದಲ್ಲಿ ವಿದ್ಯಾರ್ಥಿಗಳ ಸ್ಥಿತಿ ಅತಂತ್ರವಾಗುವ ಕಾರಣ, ಈ ಎಲ್ಲಾ ಭವಿಷ್ಯದಲ್ಲಿನ ಅತಂತ್ರ ಸ್ಥಿತಿಗಳಿಗೆ ಕಡಿವಾಣ ಹಾಕಲು ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸುವುದು

ಮಾತ್ರ ಸರಿಯಾದ ಕ್ರಮ, ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಯಾವುದೇ ತಾಂತ್ರಿಕ ಅಡಚಣೆಗಳು ಬಾರದೆ ಇರುವ ಹಾಗೆ ಹಲವು ನಿರ್ಣಯಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಸಲಹೆ ನೀಡಿದರು.

ಮೊದಲಿಗೆ ನಿಯಮಬಾಹಿರವಾಗಿ ಕೆಲವೇ ಕೆಲವು ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಿರುವುದನ್ನು ಹಿಂಪಡೆಯುವ ನಿರ್ಣಯವಾಗಬೇಕು.

ತಕ್ಷಣ 2020ರ ಜುಲೈ ಪ್ರಥಮ ಆವೃತ್ತಿಯ ವಿದ್ಯಾರ್ಥಿಗಳಿಗೆ ಮತ್ತು 2021ರ ಜನವರಿ ತಿಂಗಳಲ್ಲಿ ದ್ವಿತೀಯ ಆವೃತ್ತಿಯ ವಿದ್ಯಾರ್ಥಿಗಳಿಗೆ ನಡೆಸಬೇಕಾಗಿದ್ದ ಪ್ರಥಮ ವರ್ಷದ ಪರೀಕ್ಷೆಗಳನ್ನು ನಡೆಸದೇ ಇರುವ ಕಾರಣ ತಕ್ಷಣವೇ ಪ್ರಥಮ ವರ್ಷದ ಪರೀಕ್ಷೆಗಳನ್ನು ಎರಡು ಆವೃತ್ತಿಯ ವಿದ್ಯಾರ್ಥಿಗಳಿಗೆ ನಡೆಸುವ ನಿರ್ಣಯವನ್ನು ಕೈಗೊಳ್ಳಬೇಕು.

ಹಾಗೆಯೇ ಪ್ರಥಮ ವರ್ಷದ ಪರೀಕ್ಷೆ ಮುಗಿದ ನಂತರ ವಿದ್ಯಾರ್ಥಿಗಳು ಈಗಾಗಲೇ ದ್ವಿತೀಯ ವರ್ಷವನ್ನು ದಾಟಿಕೊಂಡು ತೃತೀಯ ವರ್ಷದ ಅಂತಿಮ ಘಟ್ಟದಲ್ಲಿ ಇರುವ ಕಾರಣ ಪ್ರಥಮ ವರ್ಷದ ಪರೀಕ್ಷಾ ಪ್ರಕ್ರಿಯೆ ಮುಗಿದ ತಕ್ಷಣವೇ, ವಿದ್ಯಾರ್ಥಿಗಳು ಓದಿಕೊಳ್ಳಲು ಅವಶ್ಯಕವಿರುವಷ್ಟು ಸಮಯ ನೀಡಿ, ದ್ವಿತೀಯ ವರ್ಷದ ಪರೀಕ್ಷೆ ತಕ್ಷಣವೇ ನಡೆಸಬೇಕು ಎಂದು ನಿರ್ಣಯವಾಗಬೇಕಾಗಿರುತ್ತದೆ.

ಹಾಗೂ 2019-20ನೇ ಸಾಲಿನ ಪ್ರಥಮ ಹಾಗೂ ದ್ವಿತೀಯ ಆವೃತ್ತಿಯ ಕೋರ್ಸ್ ಮುಕ್ತಾಯವಾಗುವ ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿಗಳ ಮೂರನೇ ವರ್ಷದ ಪರೀಕ್ಷೆಗಳನ್ನು ಅಂತಿಮಗೊಳಿಸಿ ಫಲಿತಾಂಶ ಪ್ರಕಟಿಸುವ ನಿರ್ಣಯವಾಗಬೇಕು.

ಮುಂದುವರೆದು ಪ್ರಥಮ ವರ್ಷ ಮತ್ತು ದ್ವಿತೀಯ ವರ್ಷದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮುಂದೆ ನಡೆಯುವ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡ ವರ್ಷಗಳಿಗೆ ಸಂಬಂಧಿಸಿದಂತೆ ಪೂರಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುವ ನಿರ್ಣಯವಾಗಬೇಕು.

ಹಾಗೆಯೇ ಯಾವುದೇ ತಾಂತ್ರಿಕ ತೊಂದರೆ ಆಗದ ಹಾಗೆ ವಿದ್ಯಾರ್ಥಿಗಳು ಅಂತಿಮ ವರ್ಷದಲ್ಲಿ ಇರುವ ಕಾರಣ ಮತ್ತು ಅವರ ದ್ವಿತೀಯ ವರ್ಷದ ಮತ್ತು ತೃತೀಯ ವರ್ಷದ ಪ್ರವೇಶಾತಿಗೆ ವಿಳಂಬವಾಗಲು ವಿಶ್ವವಿದ್ಯಾನಿಲಯದ ಗೊಂದಲದ ನಿರ್ಣಯಗಳೇ ಕಾರಣವಾಗಿದ್ದು ಅದನ್ನು ಸರಿಪಡಿಸುವ ಜವಾಬ್ದಾರಿಯೂ ವಿಶ್ವವಿದ್ಯಾನಿಲಯದ್ದೇ ಆಗಿರುವುದರಿಂದ ವಿದ್ಯಾರ್ಥಿಗಳ ದ್ವಿತೀಯ ಮತ್ತು ತೃತೀಯ ವರ್ಷದ ಪ್ರವೇಶಾತಿಗೆ ಸಂಬಂಧಿಸಿದ ಶುಲ್ಕವನ್ನು ಪಡೆದು ಅವರ ಪ್ರವೇಶಾತಿಯನ್ನು ಸಕ್ರಮಗೊಳಿಸಬೇಕು ಎಂದು ಹೇಳಿದರು.

ಶ್ರೀ ಧರ್ಮಪ್ರಸಾದ್‌ರವರು ಮುಂದುವರೆದು ಮಾತನಾಡಿ ವಿಶ್ವವಿದ್ಯಾಲಯದ ಗೊಂದಲದ ನಿರ್ಣಯಗಳಿಂದ ಪ್ರಥಮ ವರ್ಷ ಮತ್ತು ದ್ವಿತೀಯ ವರ್ಷದ ಪರೀಕ್ಷೆಗಳನ್ನು ವಿಶ್ವವಿದ್ಯಾಲಯವೇ ನಡೆಸದೇ ಇರುವ ಕಾರಣ ಯಾವುದೇ ತಾಂತ್ರಿಕ ತೊಂದರೆಗಳು ಆಗದೇ ಇರುವ ಹಾಗೆ ತಪ್ಪನ್ನು ಸರಿಪಡಿಸುವ ನಿಟ್ಟಿನಲ್ಲಿ ಕೋವಿಡ್ ವಿಶೇಷ ಸಂದರ್ಭವೆಂದು ಪರಿಗಣಿಸಿ 2019-20ನೇ ಸಾಲಿನ ವಿದ್ಯಾರ್ಥಿಗಳಿಗೆ ಒಂದು ಬಾರಿ ಪೂರ್ಣಪ್ರಮಾಣದ ಕ್ಯಾರಿಓವರ್ ಸಿಸ್ಟಮ್ ಜಾರಿಗೆ ತರುವ ನಿರ್ಣಯವಾಗಬೇಕು. ಅದರಿಂದಾಗಿ ಯಾವುದೇ ಅಡಚಣೆಗಳಿಲ್ಲದೆ ವಿದ್ಯಾರ್ಥಿಗಳು ದ್ವಿತೀಯ ಮತ್ತು ತೃತೀಯ ವರ್ಷದ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ ಮತ್ತು ವಿದ್ಯಾರ್ಥಿಗಳು ಈಗಾಗಲೇ ತೃತೀಯ ವರ್ಷದ ಅಂತಿಮ ಘಟ್ಟದಲ್ಲಿ ಬಂದಿರುವುದರಿಂದ ಅವರೆಲ್ಲರೂ ಪ್ರಥಮ ಮತ್ತು ದ್ವಿತೀಯ ವರ್ಷದ ಪರೀಕ್ಷೆಗಳನ್ನು ತಕ್ಷಣವೇ ಬರೆಯಲು ಅನುವು ಮಾಡಿಕೊಡುವುದು ವಿಶ್ವವಿದ್ಯಾಲಯಧ ಜವಾಬ್ದಾರಿಯಾಗಿರುತ್ತದೆ ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಮೊದಲನೆಯದಾಗಿ ಈ ವಿಷಯ ನ್ಯಾಯಲಯದಲ್ಲಿದೆ, ಎರಡನೆಯದಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಪ್ರಕರಣ 15 ಉಪಕಂಡಿಕೆ (5)ರ ಪ್ರಕಾರ ನಿರ್ಣಯ ತೆಗೆದುಕೊಂಡ ಮೇಲೆ ಪ್ರಾಧಿಕಾರಗಳಲ್ಲಿ ಇಟ್ಟು ಅನುಮೋದನೆ ಪಡೆಯಬೇಕು. ಇಲ್ಲವಾದಲ್ಲಿ

ನೇರವಾಗಿ ಘನತೆವೆತ್ತ ರಾಜ್ಯಪಾಲರ ಬಳಿ ಹೋಗಿ ಅವರ ಅನುಮೋದನೆ ಪಡೆದು ಫಲಿತಾಂಶ ಪ್ರಕಟಿಸಬೇಕಿತ್ತು. ಆದರೆ ಅದನ್ನು ಮಾನ್ಯಕುಲಪತಿಗಳು ಮಾಡಿಲ್ಲ. ಈಗ ನಾನು ಕ್ರಮ ತೆಗೆದುಕೊಳ್ಳಬೇಕು ಎಂದರೆ ಇವೆಲ್ಲಾ ಗೊಂದಲಗಳ ಬಗ್ಗೆ ಪರಿಶೀಲಿಸಬೇಕು. ಕಾನೂನಾತ್ಮಕವಾಗಿ ತೊಡಕುಗಳು ಎದುರಾಗಬಹುದು ಎಂಬ ಹಿನ್ನೆಲೆಯಲ್ಲಿ ಕಾನೂನು ಅಭಿಪ್ರಾಯ ಪಡೆಯಬೇಕು ಎಂದರು. ಇಲ್ಲವಾದಲ್ಲಿ ಮಾನ್ಯ ಕುಲಪತಿಗಳು ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್‌ಗೆ ಮಂಡಿಸಲು ಒಪ್ಪದಿದ್ದಲ್ಲಿ ಸಿಂಡಿಕೇಟು ನಿಯಮಾನುಸಾರ ಮಾನ್ಯ ಕುಲಾಧಿಪತಿಗಳಿಗೆ ಅಪೀಲು ಹೋಗಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಎನ್. ಆರ್ ಮಂಜುನಾಥರವರು ಮಾತನಾಡಿ ದೂರಶಿಕ್ಷಣದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕಾಲಮಿತಿ ನಿಗದಿಪಡಿಸಿ ಪರೀಕ್ಷೆ ನಡೆಸಬಹುದು ಎಂದರು.

ಸದಸ್ಯರಾದ ಪ್ರೊ. ವಿ. ರಿಯಾಜ್ ಮಹಮೂದ್‌ರವರು ಮಾತನಾಡಿ ಮಾನ್ಯ ಕುಲಪತಿಗಳು ಇದು ಒಂದು Hasty decision ಎಂದು ಹೇಳಿದ್ದಾರೆ. ಈ ನಿರ್ಣಯಕ್ಕೆ ಸಿಂಡಿಕೇಟ್ ಸಭೆಯ ಪೂರ್ಣ ವಿರೋಧ ಇರುವುದರಿಂದ ಈಗಲಾದರೂ ಸಿಂಡಿಕೇಟ್ ಸಭೆಯ ನಿರ್ಣಯಕ್ಕೆ ಇಡಬಹುದು ಎಂದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ಸಿಂಡಿಕೇಟ್ ತೆಗೆದುಕೊಳ್ಳುವ ನಿರ್ಣಯಕ್ಕೆ ಒಪ್ಪಿಗೆ ಇದೆ ಎಂದು ಮಾನ್ಯ ಕುಲಪತಿಗಳು ತಿಳಿಸಿದರೆ ಮತ್ತೆ ಘನತೆವೆತ್ತ ರಾಜ್ಯಪಾಲರ ಬಳಿ ಹೋಗುವುದಿಲ್ಲ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಪ್ರಕರಣ 15 ಉಪಕಂಡಿಕೆ (5)ರ ಪ್ರಕಾರ ನಾನು ನಿರ್ಧಾರ ತೆಗೆದುಕೊಂಡಿದ್ದೇನೆ. ಆದರೆ ಸಿಂಡಿಕೇಟ್ ದೂರ ಶಿಕ್ಷಣದ ವಿದ್ಯಾರ್ಥಿಗಳಿಗೆ ಪರೀಕ್ಷೆ ಮಾಡಬೇಕು ಎಂದು ನಿರ್ಧಾರ ಮಾಡಿರುತ್ತದೆ. ನನಗೆ ನಿರ್ದೇಶನ ಕೊಡಿ ಎಂದು ಕುಲಾಧಿಪತಿಗಳಿಗೆ ಕೇಳುತ್ತೇನೆ ಎಂದು ಹೇಳಿದರು.

ತಾವು ತಮ್ಮ ನಿರ್ಣಯವನ್ನು ಹಿಂಪಡೆದು ಸಿಂಡಿಕೇಟ್ ತೆಗೆದುಕೊಳ್ಳುವ ನಿರ್ಣಯಕ್ಕೆ ಒಪ್ಪಿಗೆ ನೀಡಿದರೆ ದೂರ ಶಿಕ್ಷಣ ಪರೀಕ್ಷೆಯ ಗೊಂದಲಗಳು ನಿವಾರಣೆಯಾಗಿ ಈ ವಿಷಯ ಮುಂದುವರೆಯುವುದು ತಪ್ಪುತ್ತದೆ ಎಂದು ಕೆಲವು ಸದಸ್ಯರು ತಿಳಿಸಿದರು.

ಕೊನೆಯಲ್ಲಿ ಮಾನ್ಯ ಕುಲಪತಿಗಳು ಸಿಂಡಿಕೇಟ್ ತೆಗೆದುಕೊಳ್ಳುವ ನಿರ್ಣಯಕ್ಕೆ ನನ್ನ ಒಪ್ಪಿಗೆ ಇದೆ ಎಂದರು. ಇದಕ್ಕೆ ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್ ಹಾಗೂ ಇತರ ಎಲ್ಲಾ ಸದಸ್ಯರು ಹರ್ಷ ವ್ಯಕ್ತಪಡಿಸಿದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ಮಾನ್ಯ ಕುಲಪತಿಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಪ್ರಕರಣ 15 ಉಪಕಂಡಿಕೆ (5)ರ ಪ್ರಕಾರ 2019-20ನೇ ಸಾಲಿನಲ್ಲಿ ಪ್ರವೇಶ ಪಡೆದ ದೂರ ಶಿಕ್ಷಣದ ವಿದ್ಯಾರ್ಥಿಗಳನ್ನು ಪರೀಕ್ಷೆ ಇಲ್ಲದೇ ಮುಂದಿನ ವರ್ಷಕ್ಕೆ ಪ್ರಮೋಟ್ ಮಾಡಿರುವ ನಿರ್ಣಯವನ್ನು ಹಿಂಪಡೆಯಲು ಸರ್ವಾನುಮತದಿಂದ ನಿರ್ಧರಿಸಲಾಯಿತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಲು ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು. ಈ ಹಂತದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಲು ನಿರ್ಣಯಿಸಲಾಯಿತು.

1) ಪರೀಕ್ಷೆ ಇಲ್ಲದೇ ಮುಂದಿನ ವರ್ಷಕ್ಕೆ ಪ್ರಮೋಟ್ ಮಾಡಿರುವ ನಿರ್ಣಯವನ್ನು ಹಿಂಪಡೆಯಲು ಕ್ರಮ ಕೈಗೊಳ್ಳುವುದು. ಹಾಗೂ ವೆಬ್-ಸೈಟ್‌ನಲ್ಲಿ ಪ್ರಕಟಗೊಳಿಸಿರುವ ಕೆಲವು ಅಧ್ಯಯನ ಕೇಂದ್ರಗಳ ಫಲಿತಾಂಶವನ್ನು ಈ ಕೂಡಲೇ ರದ್ದುಪಡಿಸುವುದು.
2) 2019ರ ಜುಲೈ ಪ್ರಥಮ ಆವೃತ್ತಿಯ ವಿದ್ಯಾರ್ಥಿಗಳಿಗೆ ಮತ್ತು 2020ರ ಜನವರಿ ತಿಂಗಳಲ್ಲಿ ದ್ವಿತೀಯ ಆವೃತ್ತಿಯ ವಿದ್ಯಾರ್ಥಿಗಳಿಗೆ ನಡೆಸಬೇಕಾಗಿದ್ದ ಪ್ರಥಮ ವರ್ಷದ ಪರೀಕ್ಷೆಗಳನ್ನು ನಡೆಸದೇ ಇರುವ ಕಾರಣ ತಕ್ಷಣವೇ ಎರಡು ಆವೃತ್ತಿಯ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ಪರೀಕ್ಷೆಗಳನ್ನು ನಡೆಸುವುದು.
3) ವಿದ್ಯಾರ್ಥಿಗಳಿಗೆ ಯಾವ ಶೈಕ್ಷಣಿಕ ವರ್ಷವೂ ವ್ಯರ್ಥವಾಗದ ರೀತಿಯಲ್ಲಿ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ದಪಡಿಸಿ ಪರೀಕ್ಷೆ ವೇಳಾಪಟ್ಟಿಯನ್ನು ಪ್ರಕಟಿಸುವುದು.

4) 2019–20ನೇ ಸಾಲಿನ ಪ್ರಥಮ ಹಾಗೂ ದ್ವಿತೀಯ ಆವೃತ್ತಿಯ ಕೋರ್ಸ್ ಮುಕ್ತಾಯವಾಗುವ ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿಗಳ ಮೂರನೇ ವರ್ಷದ ಪರೀಕ್ಷೆಗಳನ್ನು ಅಂತಿಮಗೊಳಿಸಿ ಫಲಿತಾಂಶ ಪ್ರಕಟಿಸುವುದು.

5) ಪ್ರಥಮ ವರ್ಷ ಮತ್ತು ದ್ವಿತೀಯ ವರ್ಷದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮುಂದೆ ನಡೆಯುವ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡ ವರ್ಷಗಳಿಗೆ ಸಂಬಂಧಿಸಿದಂತೆ ಪೂರಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುವುದು.

6) ವಿದ್ಯಾರ್ಥಿಗಳ ದ್ವಿತೀಯ ಮತ್ತು ತೃತೀಯ ವರ್ಷದ ಪ್ರವೇಶಾತಿಗೆ ಸಂಬಂಧಿಸಿದ ಶುಲ್ಕವನ್ನು ಪಡೆದು ಅವರ ಪ್ರವೇಶಾತಿಯನ್ನು ಅನುಮೋದಿಸುವುದು.

7) 2019–20ನೇ ಸಾಲಿನ ವಿದ್ಯಾರ್ಥಿಗಳಿಗೆ ಮುಂದಿನ ಪ್ರವೇಶಾತಿಗೆ ಅನುಕೂಲವಾಗುವಂತೆ ಒಂದು ಬಾರಿ ಪೂರ್ಣಪ್ರಮಾಣದ ಕ್ಯಾರಿಓವರ್ ಸಿಸ್ಟಮ್ ಕೊಡುವುದು.

8) ಯಾವುದೇ ಅಡಚಣೆಗಳಿಲ್ಲದೆ ವಿದ್ಯಾರ್ಥಿಗಳು ದ್ವಿತೀಯ ಮತ್ತು ತೃತೀಯ ವರ್ಷದ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಮತ್ತು ವಿದ್ಯಾರ್ಥಿಗಳು ಈಗಾಗಲೇ ತೃತೀಯ ವರ್ಷದ ಅಂತಿಮ ಘಟ್ಟದಲ್ಲಿ ಬಂದಿರುವುದರಿಂದ ಅವರೆಲ್ಲರೂ ಪ್ರಥಮ ಮತ್ತು ದ್ವಿತೀಯ ವರ್ಷದ ಪರೀಕ್ಷೆಗಳನ್ನು ತಕ್ಷಣವೇ ಬರೆಯಲು ಅನುವು ಮಾಡಿಕೊಡುವುದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ ತಕ್ಷಣ ಪರೀಕ್ಷೆ ನಡೆಸಲು ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**2022–ಸಿಂ–1.41:** ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ :

ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಕ್ಯಾಮರಾ ಮೂಲಕ ರೆಕಾರ್ಡ್ ಮಾಡುವುದೂ ಸೇರಿದಂತೆ ಇನ್ನಿತರೆ ವಿಷಯಗಳ ಕುರಿತು ಘನತೆವೆತ್ತ ರಾಜ್ಯಪಾಲರ ಕಛೇರಿಯಿಂದ ಬಂದ ಸುತ್ತೋಲೆಯಲ್ಲಿನ ಮಾರ್ಗದರ್ಶಿ ಸೂತ್ರಗಳನ್ನು ಸಭೆಯಲ್ಲಿ ಮೊದಲಿಗೆ ವಿವರಿಸಲಾಯಿತು.

**ದಿನಾಂಕ:27–10–2021 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದೂಡಿದ ವಿಷಯ :**

**ಶೈಕ್ಷಣಿಕ ವಿಭಾಗ**

**2021–ಸಿಂ–3.17(ಇ):** Design, Develop, Implementation & Maintenance of Fraternity Platform Infrastructure (FPI) ನ್ನು ವಿಶ್ವವಿದ್ಯಾಲಯದಲ್ಲಿ ಆರಂಭಿಸಲು ಉದ್ದೇಶಿಸಿರುವ ಬಗ್ಗೆ.

**ಚರ್ಚೆ:** ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಮತ್ತು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಎಲ್ಲಾ ಕಾಲೇಜುಗಳಲ್ಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಅಭ್ಯಾಸಿಸಿರುವ ಹಳೆಯ ಮತ್ತು ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಹೊಂದಿರುವ ಮತ್ತು ಪದವಿ ಪಡೆದು ನಿರ್ಗಮಿಸುವ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಬೋಧಕ ವರ್ಗವನ್ನು ಮಾಹಿತಿ ತಂತ್ರಜ್ಞಾನದ ಉತ್ಕೃಷ್ಟವಾದ ತಂತ್ರಾಂಶದ ಬಳಕೆಯೊಂದಿಗೆ ನಿರಂತರವಾಗಿ ಒಗ್ಗೂಡಿಸುವುದರೊಂದಿಗೆ ಸಮ್ಮಿಲನಗೊಳಿಸಿ, ಒಂದೇ ವೇದಿಕೆಯಡಿ ಪರಸ್ಪರರಲ್ಲಿ ನಿರಂತರವಾಗಿ ಭೌತಿಕ ಜ್ಞಾನವನ್ನು ಹಂಚಿಕೊಳ್ಳುವುದು ಮತ್ತು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿನ ಎಲ್ಲಾ ಕಾಲೇಜುಗಳ ಸರ್ವಾಂಗೀಣ ಅಭಿವೃದ್ಧಿ ಕಾರ್ಯವು ಸೇರಿದಂತೆ ಹಲವಾರು ಉಪಯುಕ್ತತೆಗಳನ್ನು ಪಡೆಯಲು ಅಗತ್ಯವಿದ್ದ Design, Develop, Implementation &

Maintenance of Fraternity Platform Infrastructure (FPI) ಯೋಜನೆಯ ಕುರಿತು ಪರಿಶೀಲಿಸಲು ರಚಿಸಲಾಗಿದ್ದ ಸಮಿತಿಯು ನೀಡಿರುವ ವರದಿಯನ್ನು ದಿ:14-07-2021ರಂದು ನಡೆದ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ವಿಷಯವನ್ನು ಮುಂದೂಡಲಾಗಿದ್ದರಿಂದ ಈ ಸಭೆಗೆ ಮಂಡಿಸಲಾಗಿದೆ ಎಂದರು.

ಮುಂದುವರೆದು ಮಾತನಾಡಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳು ಯಾವ ಹುದ್ದೆಯಲ್ಲಿದ್ದಾರೆ ಎಂಬ ಮಾಹಿತಿಯನ್ನು ತಂತ್ರಾಂಶದ ಮೂಲಕ ಪಡೆದು ಈಗಿನ ವಿದ್ಯಾರ್ಥಿಗಳಿಗೆ ಮಾಹಿತಿ ತಿಳಿಯುವಂತೆ ಮಾಡುವುದು, ಇದರಿಂದ ಪ್ರಸ್ತುತ ಪದವಿ ಪಡೆಯುವ ನಿರುದ್ಯೋಗಿ ವಿದ್ಯಾರ್ಥಿಗಳು ಉದ್ಯೋಗದ ಮಾಹಿತಿ ದೊರೆತು, ಉದ್ಯೋಗ ಪಡೆಯುವ ಅವಕಾಶಗಳು ಹೆಚ್ಚಾಗುತ್ತದೆ, ಸಂಪರ್ಕ ಬೆಳೆಯುತ್ತದೆ ಎಂದು ಸದರಿ ಸಂಸ್ಥೆಯವರು ತಿಳಿಸಿದ್ದಾರೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸದರಿ ಸಂಸ್ಥೆಯವರು ಈ ತಂತ್ರಾಂಶಕ್ಕಾಗಿ ಕೋಟಿಗಟ್ಟಲೆ ಹಣ ವ್ಯಯ ಮಾಡುತ್ತಾರೆ ವಿಶ್ವವಿದ್ಯಾಲಯದಿಂದ ಏನೂ ನಿರೀಕ್ಷಿಸುವುದಿಲ್ಲ. ಈಗಾಗಲೇ ರಾಜೀವ್ ಗಾಂಧಿ ಮೆಡಿಕಲ್ ಸೈನ್ಸ್ ವಿಶ್ವವಿದ್ಯಾಲಯ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಗಳು ಈ ಪ್ರಾಜೆಕ್ಟ್‌ನ್ನು ಅಳವಡಿಸಿಕೊಂಡಿರುತ್ತಾರೆ. ರಾಜೀವ್‌ಗಾಂಧಿ ವಿಶ್ವವಿದ್ಯಾಲಯದಲ್ಲಿ 1000 ವಿದ್ಯಾರ್ಥಿಗಳಿಂದ ಪ್ರಾರಂಭವಾಗಿ 34000 ವಿದ್ಯಾರ್ಥಿಗಳವರೆಗೂ ಬೆಳೆದಿದೆ. ಜಾನ್ ಹಾಕಿಂಗ್ ವಿಶ್ವವಿದ್ಯಾಲಯದ ಒಬ್ಬ ಹಳೆಯ ವಿದ್ಯಾರ್ಥಿ ಅವರು ಪದವಿ ಪಡೆದ ವಿಶ್ವವಿದ್ಯಾಲಯಕ್ಕೆ ರೂ.34 ಕೋಟಿ ಹಣ ದೇಣಿಗೆ ನೀಡಿದ್ದಾರೆ. ನಮ್ಮ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳು ಕೂಡ ವಿಶ್ವದ ಎಲ್ಲೆಡೆ ಇದ್ದಾರೆ. ಒಳ್ಳೆಯ ಹುದ್ದೆಯಲ್ಲಿದ್ದಾರೆ ಅವರಿಗೆಲ್ಲ ಒಂದು ಗ್ಲೋಬಲ್ ಪ್ಲ್ಯಾಟ್ ಫಾರಂ ಮಾಡಿ ವಿಶ್ವವಿದ್ಯಾಲಯದೊಂದಿಗೆ ನಿರಂತರ ಸಂಪರ್ಕದಲ್ಲಿರುವಂತೆ ಮಾಡಬಹುದು. ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಅವರ ಕೊಡುಗೆ ನೀಡುವಂತೆ ಮಾಡಬಹುದು. ನಮ್ಮ ವಿಶ್ವವಿದ್ಯಾಲಯದಲ್ಲಿ ಸುಮಾರು 6000 ಸ್ನಾತಕೋತ್ತರ ವಿದ್ಯಾರ್ಥಿಗಳಿದ್ದಾರೆ. ಅವರಿಗೂ ಹಳೆಯ ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಕಲ್ಪಿಸಿ ಅವರ ಅನುಭವದ ಮೂಲಕ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈ ಯೋಜನೆ ಉತ್ತಮವಾಗಿದೆ ಎಂದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಈ ಬಗ್ಗೆ ಮಾಹಿತಿ ಕೋರಿ ದಿ:21-10-2021ರಂದು ಒಂದು ಪತ್ರ ಬರೆದಿದ್ದೆ ಆದರೆ ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಅಲ್ಲದೆ ಈ ಬಗ್ಗೆ ಕಂಪ್ಯೂಟರ್ ತಂತ್ರಜ್ಞರಿಂದ ಮಾಹಿತಿ ಪಡೆಯಬೇಕು. ವಿಶ್ವವಿದ್ಯಾಲಯದಲ್ಲಿ ವೈ-ಫೈ ಇರುವುದರಿಂದ ವಿದ್ಯಾರ್ಥಿಗಳು ಉಚಿತವಾಗಿ ಎಲ್ಲಾ ಮಾಹಿತಿ ಪಡೆಯಬಹುದು ಈ ಪ್ರಾಜೆಕ್ಟ್ ಅಗತ್ಯವೇನು ಎಂದರು. ಇದರಲ್ಲಿ ಏನೇನು ಸೇವೆ ಕೊಡುತ್ತಾರೆ ಎಂಬ ಮಾಹಿತಿ ಇಲ್ಲ ಎಂದು ಹೇಳಿದರು. ಯಾವುದೇ ಹಣಕಾಸಿನ ಲಾಭವಿಲ್ಲದೇ ಪ್ರಾಜೆಕ್ಟ್ ನೀಡುವುದು ನಿಜವಲ್ಲ ಎಂದರು.

ಸದಸ್ಯರಾದ ಶ್ರೀ ರಮೇಶ್‌ಬಾಬುರವರು ಮಾತನಾಡಿ ಇದರಲ್ಲಿ ವಿಶ್ವವಿದ್ಯಾಲಯದ ಪಾತ್ರವೇನು ಎಂದು ಕೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಪ್ರಾರಂಭದಲ್ಲಿ ಈ ಯೋಜನೆಯ ಬಗ್ಗೆ ಸ್ಪಷ್ಟತೆ ಇರಲಿಲ್ಲ ಈಗ ಸ್ವಲ್ಪ ತಿಳಿದಿದೆ. ಸದಸ್ಯತ್ವ ಪಡೆಯುವ ವಿದ್ಯಾರ್ಥಿಗಳಿಂದ ಸಂದಾಯವಾಗುವ ಶುಲ್ಕದಲ್ಲಿ ಶೇಕಡಾ 80% ಸಂಸ್ಥೆಯವರಿಗೆ 20% ವಿಶ್ವವಿದ್ಯಾಲಯಕ್ಕೆ ಎಂದು ಹೇಳಿದರು. ಈ ಹಿಂದೆ ಈ ಯೋಜನೆಗೆ ಸಮ್ಮತಿ ಕೊಡಬಾರದು ಎಂದು ನಿರ್ಣಯಿಸಿದ್ದೆವು ಆದರೆ ಈಗ ಸಮಿತಿಯ ಸದಸ್ಯರಾದ ಶ್ರೀ ಎಸ್.ಆರ್. ನಾಗರಾಜ್ ಸರ್ ರವರು ಇದು ಉತ್ತಮವಾದ ಪ್ರಾಜೆಕ್ಟ್, ಇದನ್ನು ಅಳವಡಿಸುವುದರಲ್ಲಿ ವಿಶ್ವವಿದ್ಯಾಲಯದ ಪಾತ್ರ ಏನೂ ಇಲ್ಲ ಎಲ್ಲ ಸಂಸ್ಥೆಯವರೇ ಮಾಡುತ್ತಾರೆ ಎಂದು ಮಾಹಿತಿ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಈ

ಬಗ್ಗೆ ಕ್ರಮ ಕೈಗೊಳ್ಳಬೇಕಿದೆ, ಯಾವುದೇ ಹಣಕಾಸಿನ ಸಹಾಯವಿಲ್ಲದೇ ಸಾಫ್ಟ್ ವೇರ್ ಕೊಡುವುದಾದರೆ ಮಾಡಬಹುದು. ಆದರೆ ವಿಶ್ವವಿದ್ಯಾಲಯ ಮತ್ತು ಸಂಸ್ಥೆಯ ಹಂಚಿಕೆ ಶೇಕಡಾ 20% ಹಾಗೂ 80% ಎಂದು ಇರುವುದು ಬದಲಾಗಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಪುನ: ಮಾತನಾಡಿ ಇದು ಸೇವೆಯಲ್ಲ ಆದ್ದರಿಂದ ಅಗತ್ಯವಿಲ್ಲ. ಸ್ನಾತಕ ಪದವಿಗಂತೂ ಬೇಡವೇ ಬೇಡ ಎಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಈ ಯೋಜನೆಯ ಸದಸ್ಯತ್ವ ಪಡೆಯುವುದು ಕಡ್ಡಾಯವಲ್ಲ ಇಚ್ಚೆ ಇರುವ ವಿದ್ಯಾರ್ಥಿಗಳು ಮಾತ್ರ ಸದಸ್ಯತ್ವ ಪಡೆಯಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ ಒಂದು ಟೆಕ್ನಿಕಲ್ ಸಮಿತಿ ರಚಿಸಿ ಇಷ್ಟೆಲ್ಲಾ ಅಂಕಿ-ಅಂಶಗಳನ್ನು ಕೊಟ್ಟು ಚರ್ಚಿಸಿ ಕ್ರಮಕೈಗೊಳ್ಳಬಹುದು ಎಂದರು. ಒಂದು ವೇಳೆ ಕಡ್ಡಾಯವಾಗಿ ಜಾರಿಗೆ ತಂದರೂ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಆದಾಯ ಬರುವ ಹಾಗೆ ಮಾಡಬೇಕು ಎಂದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಪುನ: ಮಾತನಾಡಿ ಇದು ಸೇವೆಯಲ್ಲ ಜೀವನಪರ್ಯಂತ ಆದಾಯ ಬರುವಂತೆ ಮಾಡುವ ಯೋಜನೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಈ ಯೋಜನೆಯನ್ನು ಕೈ ಬಿಡಬೇಕೆಂದು ತಿಳಿಸಿದ್ದೆವು. ಆದರೆ ಇದರಿಂದ ವಿದ್ಯಾರ್ಥಿಗಳಿಗೆ ಉಪಯೋಗ ಇರುವುದರಿಂದ ಇದನ್ನು ಜಾರಿಗೆ ತರಬಹುದು ಆದರೆ ಹಂಚಿಕೆ ಮಾತ್ರ ಬದಲಾಗಬೇಕು ಎಂದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ಸಂಸ್ಥೆಯವರನ್ನು ಕರೆದು ನೆಗೋಷಿಯೇಷನ್ ಮಾಡಿ ಎಂದರು.

ಸದಸ್ಯರಾದ ಶ್ರೀ ನಿರಂಜನಮೂರ್ತಿಯವರು ಮಾತನಾಡಿ ಇದರಿಂದ ವಿಶ್ವವಿದ್ಯಾಲಯಕ್ಕೆ ನಷ್ಟವೇನೂ ಇಲ್ಲ ಮಾಡದಿದ್ದರೆ 20% ಆದಾಯ ಕೂಡ ವಿಶ್ವವಿದ್ಯಾಲಯಕ್ಕೆ ಬರುವುದು ತಪ್ಪುತ್ತದೆ ಎಂದರು. ಶ್ರೀ ರಾಮಲಿಂಗಪ್ಪರವರು ಇದನ್ನು ಅನುಮೋದಿಸಿದರು.

ಇದಕ್ಕೂ ಪ್ರತಿಕ್ರಿಯಿಸಿದ ಸದಸ್ಯರಾದ ಕಿರಣ್ ರವೀಂದ್ರ ದೇಸಾಯಿಯವರು ಜಾರಿಗೆ ತರುವುದೇ ಆದಲ್ಲಿ ಸಂಸ್ಥೆಯವರು ವಿಶ್ವವಿದ್ಯಾಲಯದಿಂದ ಯಾವುದೇ ಧನಸಹಾಯ ಪಡೆಯದೇ ತಮ್ಮದೇ ಖರ್ಚಿನಲ್ಲಿ ಸಾಫ್ಟವೇರ್ ನೀಡಬೇಕು. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮಾತ್ರ ಜಾರಿಗೆ ತರಬೇಕು. ವಿದ್ಯಾರ್ಥಿಗಳಿಂದ ಸಂದಾಯವಾಗುವ ಶುಲ್ಕದಲ್ಲಿ ಶೇಕಡಾ 80% ವಿಶ್ವವಿದ್ಯಾಲಯಕ್ಕೆ 20% ಸಂಸ್ಥೆಯವರಿಗೆ ಹಂಚಿಕೆಯಾಗಬೇಕು. ಎಷ್ಟೇ ಆದರೂ ಮುಂದೆ ಇದು ವಿದ್ಯಾರ್ಥಿಗಳಿಗೆ ಕಡ್ಡಾಯವಾಗೇ ಆಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ 30% ವಿಶ್ವವಿದ್ಯಾಲಯಕ್ಕೆ 70% ಸಂಸ್ಥೆಯವರಿಗೆ ಎಂದು ಒಪ್ಪಬಹುದು ಎಂದರು. ಇದಕ್ಕೆ ಶ್ರೀ ಸಂತೋಷ್ ಬಳ್ಳೇಕೆರೆಯವರು ಧ್ವನಿಗೂಡಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ Design, Develop, Implementation & Maintenance of Fraternity Platform Infrastructure (FPI) ಯೋಜನೆಯ ಕುರಿತು ಈಗಾಗಲೇ ಮಾಡಿಕೊಂಡಿರುವ ಎಂ.ಒ.ಯು. ರದ್ದುಪಡಿಸಿ, ವಿಶ್ವವಿದ್ಯಾಲಯದಿಂದ ಯಾವುದೇ ಹಣಕಾಸಿನ ನೆರವನ್ನು ಪಡೆಯದೆ ಸಂಪೂರ್ಣ ವೆಚ್ಚವನ್ನು ಸಂಸ್ಥೆಯೇ ಭರಿಸಿ ಸದರಿ ಯೋಜನೆಯನ್ನು ವಿಶ್ವವಿದ್ಯಾಲಯಕ್ಕೆ

ಅಳವಡಿಸಬೇಕು ಹಾಗೂ ವಿದ್ಯಾರ್ಥಿಗಳಿಂದ ಸಂದಾಯವಾಗುವ ಸದಸ್ಯತ್ವ ಶುಲ್ಕದಲ್ಲಿ ಶೇಕಡಾ 70% ಸಂಸ್ಥೆಯವರಿಗೆ 30% ವಿಶ್ವವಿದ್ಯಾಲಯಕ್ಕೆ ನೀಡಬೇಕು ಎಂದು ನಿರ್ಣಯಿಸಲಾಯಿತು.

**2022–ಸಿಂ–1.42: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು :**

– ಯಾವುದೂ ಇರುವುದಿಲ್ಲ –

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 45
ಶಿವಮೊಗ್ಗ ಜಿಲ್ಲೆ

ಸಹಿ/–
ಕುಲಪತಿಗಳು